ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಅಮೇರಿಕವು ಮತ್ತೆ ಯುದ್ಧ ಆರಂಭಿಸಲು ಯತ್ನಿಸುತ್ತಿದೆ. ಜೊತೆಗೆ ಇರಾನ್ ಶರಣಾಗ ಬಹುದೆನ್ನುವುದನ್ನು ಸಹ ಬಯಸುತ್ತಿದೆಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್ ತಿಳಿಸಿದ್ದಾರೆ.


21 ಮೇ, 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 71 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629





ಇಟಲಿ, ಭಾರತ : ಉಭಯ ದೇಶಗಳ ಮಧುರ ಬಾಂಧವ್ಯದ ಬುನಾದಿ » 2





ಒಂದೇ ಸಲ ಚುನಾವಣೆ ನಡೆದರೆ 7 ಲಕ್ಷ ಕೋ.ರೂ.ಉಳಿತಾಯ » 3





ನೀಟ್ ಪರೀಕ್ಷೆ: ತಜ್ಞರ ಸಮಿತಿಯಿಂದ ಶಿಫಾರಸ್ಸು ಸಲ್ಲಿಕೆ » 4


# ಭಾರತ-ಇಟಲಿ ಪಾಲುದಾರಿಕೆ ಮೇಲ್ದರ್ಜೆಗೆ

## ದ್ವಿಪಕ್ಷೀಯ ಮಾತುಕತೆ ಬಳಿಕ ಇಟಲಿ ಪ್ರಧಾನಿ ಮೆಲೋನಿ, ನರೇಂದ್ರ ಮೋದಿ ಘೋಷಣೆ

• ಪ್ರಜೋದಯ ವರದಿ

**ನವದೆಹಲಿ:** ಭಾರತ ಹಾಗು ಇಟಲಿ ದೇಶಗಳ ಸಂಬಂಧವು ವಿಶೇಷ ಕಾರ್ಯತಂತ್ರಾತ್ಮಕ ಪಾಲುದಾರಿಕೆ ಮೇಲ್ದರ್ಜೆಗೇರಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರು ಘೋಷಿಸಿದ್ದಾರೆ.

ಐದು ರಾಷ್ಟ್ರಗಳ ಪ್ರವಾಸದಲ್ಲಿರುವ ನರೇಂದ್ರ ಮೋದಿ ಅವರು ಇಟಲಿಗೆ ಭೇಟಿ ನೀಡಿ, ಜಾರ್ಜಿಯಾ ಮೆಲೋನಿ ಅವರ ಜೊತೆ ದ್ವಿಪಕ್ಷೀಯ ಮಾತುಕತೆಯಲ್ಲಿ ಪಾಲ್ಗೊಂಡರು. ರೋಮ್‌ನ ವಿಲ್ಲಾ ಪಾಂಫಿಲ್‌ನಲ್ಲಿ ನಡೆದ ಮಾತುಕತೆಯ ನಂತರ ಜಂಟಿ ಪತ್ರಿಕಾ ಹೇಳಿಕೆ ಹೊರಡಿಸಿರುವ ಮೋದಿ ಅವರು, ನಮ್ಮ ಸಂಬಂಧವನ್ನು ವಿಶೇಷ ಕಾರ್ಯತಂತ್ರಾತ್ಮಕ ಪಾಲುದಾರಿಕೆಗೆ ಮೇಲ್ದರ್ಜೆಗೆ ಏರಿಸುತ್ತಿರುವುದನ್ನು ಘೋಷಿಸಲು ನನಗೆ ಸಂತೋಷವಾಗಿದೆ. ಇಟಲಿ ಮತ್ತು ಭಾರತದ



ನಡುವಿನ ಸಂಬಂಧ ಎತ್ತರಕ್ಕೇರಿದೆ. ಇದು ರಕ್ಷಣಾ ವ್ಯವಸ್ಥೆ, ವ್ಯಾಪಾರ, ತಂತ್ರಜ್ಞಾನ ಮತ್ತು ಉತ್ಪಾದನಾ ಕ್ಷೇತ್ರಗಳಲ್ಲಿನ ಸಹಕಾರದ ಪ್ರಮುಖ ವಿಸ್ತರಣೆಯನ್ನು ಸೂಚಿಸುತ್ತದೆ. ಭಾರತ ಮತ್ತು ಐರೋಪ್ಯ ಒಕ್ಕೂಟದ ಮಧ್ಯೆ ಮುಕ್ತ ವ್ಯಾಪಾರ ಒಪ್ಪಂದ ಏರ್ಪಡಲು ಇಟಲಿ ನೀಡಿದ ಬೆಂಬಲಕ್ಕಾಗಿ ಧನ್ಯವಾದ ಹೇಳಿದ್ದಾರೆ.

**ಐತಿಹಾಸಿಕ ಭೇಟಿ ಎಂದ ಮೆಲೋನಿ**

ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರು ಈ ಭೇಟಿಯನ್ನು ಉಭಯ ದೇಶಗಳ ಸಂಬಂಧದಲ್ಲಿ ಒಂದು ಐತಿಹಾಸಿಕ ದಿನವೆಂದು ಬಣ್ಣಿಸಿದರು. 2014ರಲ್ಲಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಮೋದಿ ಅವರು ಇಟಲಿಗೆ ನೀಡುತ್ತಿರುವ ಮೊದಲ ದ್ವಿಪಕ್ಷೀಯ ಭೇಟಿ ಇದಾಗಿದೆ. ಈ ಹಿಂದೆ ಭಾರತದ ಪ್ರಧಾನಿಯೊಬ್ಬರು ಇಟಲಿಗೆ ದ್ವಿಪಕ್ಷೀಯ ಭೇಟಿ ನೀಡಿದ್ದು 2000ನೇ ಇಸವಿಯಲ್ಲಿ. ಈಗ ಮೋದಿ ಭೇಟಿಯಿಂದ ಭಾರತ ಹಾಗು ಇಟಲಿ ನಡುವಿನ ಸಂಬಂಧಕ್ಕೆ ಹೊಸ ಚೈತನ್ಯ ನೀಡಲಾಗುತ್ತಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಉಭಯ ದೇಶಗಳು ರಕ್ಷಣಾ ವಲಯದಲ್ಲಿ ಪರಸ್ಪರ ಸಹಕಾರವನ್ನು ಬಲಪಡಿಸುತ್ತಿವೆ. ಪ್ರಧಾನಿ ಮೋದಿ ಅವರು, ಭಾರತ ಮತ್ತು ಇಟಲಿಯಲ್ಲಿ ಜಂಟಿಯಾಗಿ ಉತ್ಪಾದಿಸಿ, ಜಗತ್ತಿಗೆ ತಲುಪಿಸಿ ಎಂಬ ದೂರದೃಷ್ಟಿಯೊಂದಿಗೆ ಜಂಟಿ ಉತ್ಪಾದನೆ ಮತ್ತು ಪೂರೈಕೆ ಸರಪಳಿ ವಿಧಾನವನ್ನು ಉತ್ತೇಜಿಸಲಾಗುತ್ತಿದೆ. ಪ್ರಸ್ತುತ 1,000ಕ್ಕೂ ಹೆಚ್ಚು ಭಾರತೀಯ ಮತ್ತು ಇಟಾಲಿಯನ್ ಕಂಪನಿಗಳು ಪರಸ್ಪರರ ಮಾರುಕಟ್ಟೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದರು

**ದ್ವಿಪಕ್ಷೀಯ ವ್ಯಾಪಾರ**

ಭಾರತ ಮತ್ತು ಇಟಲಿ ನಡುವಿನ ದ್ವಿಪಕ್ಷೀಯ ವ್ಯಾಪಾರವನ್ನು 2029ರ ವೇಳೆಗೆ 20 ಬಿಲಿಯನ್ ಯೂರೋಗಿಂತ ಹೆಚ್ಚಿಸುವ ಗುರಿಯನ್ನು ಹೊಂದಲಾಗಿದೆ. ಕೃತಕ ಬುದ್ಧಿಮತ್ತೆ (ಎಐ), ಕ್ವಾಂಟಮ್ ಕಂಪ್ಯೂಟಿಂಗ್, ಬಾಹ್ಯಾಕಾಶ ತಂತ್ರಜ್ಞಾನ ಮತ್ತು ಡಿಜಿಟಲ್ ಮೂಲಸೌಕರ್ಯ ಕ್ಷೇತ್ರಗಳಲ್ಲಿ ಸಹಕಾರವನ್ನು ವಿಸ್ತರಿಸಲಾಗುವುದು. ಎಐ ತಂತ್ರಜ್ಞಾನವು ಮಾನವ ಕೇಂದ್ರಿತವಾಗಿರಬೇಕೆಂಬ ಭಾರತದ ಮಾನವ್ ಪರಿಕಲ್ಪನೆ ಮತ್ತು ಇಟಲಿಯ ನೈತಿಕ ಚೌಕಟ್ಟನ್ನು ಒಟ್ಟಿಗೆ ತರಲು ಚಿಂತಿಸಲಾಗಿದೆ.

**ಪ್ರಾದೇಶಿಕ ಸಂಪರ್ಕ**

ಏಷ್ಯಾ, ಮಧ್ಯಪ್ರಾಚ್ಯ ಮತ್ತು ಯುರೋಪ್‌ನ್ನು ಸಂಪರ್ಕಿಸುವ ಭಾರತ- ಮಧ್ಯಪ್ರಾಚ್ಯ- ಯುರೋಪ್ ಆರ್ಥಿಕ ಕಾರಿಡಾರ್ ಯೋಜನೆಗೆ ಉಭಯ ನಾಯಕರು ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ. ಭೌಗೋಳಿಕವಾಗಿ ಇಂಡೋ-ಪೆಸಿಫಿಕ್ ಮತ್ತು ಮೆಡಿಟರೇನಿಯನ್ ಪ್ರದೇಶಗಳನ್ನು ಜೋಡಿಸುವ ಮೂಲಕ ಈ ಪಾಲುದಾರಿಕೆ ಜಾಗತಿಕ ರಾಜತಾಂತ್ರಿಕತೆಗೆ ಹೊಸ ಆಯಾಮ ನೀಡಲಿದೆ ಎಂದು ಈ ನಾಯಕರು ಅಭಿಪ್ರಾಯಪಟ್ಟಿದ್ದಾರೆ.

# ಡಿ.ಕೆ.ಶಿವಕುಮಾರ್ ವಿರುದ್ಧ ನಿಖಿಲ್ ನೇರ ವಾಗ್ದಾಳಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಅಧಿಕಾರ ಯಾರಿಗೂ ಶಾಶ್ವತವಲ್ಲ, ದುಡ್ಡಿನ ಮದದಲ್ಲಿ ಮಾತನಾಡುವುದನ್ನು ಬಿಟ್ಟು ಜನರು ಕೊಟ್ಟಿರುವ ಗೌರವವನ್ನು ಉಳಿಸಿಕೊಳ್ಳುವತ್ತ ಗಮನ ಹರಿಸಿ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ನೇರ ವಾಗ್ದಾಳಿ ನಡೆಸಿದರು.

ಪಟ್ಟಣದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ಸ್ಟೇಟಸ್ ಬಗ್ಗೆ ಮಾತನಾಡುವ ನಿಮಗೆ ನಿಮ್ಮ ಸ್ಟೇಟಸ್‌ನ ಅರಿವಿರಬೇಕು. 136 ಶಾಸಕರನ್ನು ರಾಜ್ಯದ ಜನರು ಗೆಲ್ಲಿಸುವ ಮೂಲಕ ಭಿಕ್ಷೆ ನೀಡಿದ್ದಾರೆ. ಜನರ ಋಣ ತೀರಿಸುವತ್ತ ಮೊದಲು ಗಮನ ಹರಿಸಿ. 2028ಕ್ಕೆ ನೀವು ಮಾಜಿ ಆಗಿರುತ್ತೀರಿ. ಅಧಿಕಾರ ಯಾರಿಗೂ ಶಾಶ್ವತವಲ್ಲ ವೆಂಬ ಅರಿವಿದ್ದರೆ ಹೀಗೆಲ್ಲಾ ಮಾತನಾಡುತ್ತಿರಲಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಮಂಗಳವಾರ ತುಮಕೂರಿನಲ್ಲಿ ನಡೆದ ಸಾಧನಾ ಸಮಾವೇಶದಲ್ಲಿ



ಜೆಡಿಎಸ್ ಕೇವಲ 17 ಸ್ಥಾನ ಗೆದ್ದಿದೆ, ಪಕ್ಷದ ಕಥೆ ಮುಗಿದಿದೆ ಎಂದು ಮಾತನಾಡಿದ್ದಿರಿ. ನೀವು ಶಾಶ್ವತವಾಗಿ ಅಧಿಕಾರದಲ್ಲಿ ಇರುತ್ತೀರಾ, 136 ಶಾಸಕರನ್ನು ಹೊಂದಿರುವ ಉಪ ಮುಖ್ಯಮಂತ್ರಿ ತಮ್ಮ ಕಚೇರಿಯಲ್ಲಿ ಡಿಸೈನ್ ಬಾಕ್ಸ್ ಮಾಡಿಕೊಂಡಿದ್ದಾರೆ. ಸೋಷಿಯಲ್ ಮಿಡಿಯಾದಲ್ಲಿ ಡಿ.ಕೆ.ಶಿವಕುಮಾರ್ ಎಂಬ ನಾನು ಎಂಬ ಹಾಡುಗಳು ಆಗಾಗ ಬರುತ್ತವೆ, ಮುಂದಿನ ಸಾಲು ಏನೆಂದು ನನಗಂತೂ ಅರ್ಥವಾಗುತ್ತಿಲ್ಲವೆಂದು ವ್ಯಂಗ್ಯವಾಡಿದರು.

ಪ್ರತಿ ಸಂದರ್ಭದಲ್ಲೂ ಅವರ ಸಹೋದರ ಕೂಲಿ ಕೊಡಿ ಎನ್ನುತ್ತಾರೆ. ಅದಕ್ಕಾಗಿ ದೆಹಲಿಯಲ್ಲಿ ಜಗಳ ಸಹ ಮಾಡುತ್ತಾರೆ. ನಿಜವಾಗಿಯೂ ಸಹೋದರರು ದುಡಿದಿದ್ದರೆ ದೆಹಲಿಯಿಂದ ಕೂಲಿ ತೆಗೆದುಕೊಂಡು ಬರಲಿ. ಆ ಮೇಲೆ ನನ್ನ ಸ್ಟೇಟಸ್ ಬಗ್ಗೆ ಮಾತಾಡಲಿ ಎಂದು ವಾಗ್ದಾಳಿ ನಡೆಸಿದರು.

**ರಿಯಲ್ ಎಸ್ಟೇಟ್ ದಂಧೆಕೋರರಿಗೆ ನೆರವು**

ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಮಾತನಾಡಿದ್ದಕ್ಕೆ ಡಿ.ಕೆ.ಶಿವಕುಮಾರ್‌ಗೆ ತಳಮಳ ಶುರುವಾಗಿದೆ ಎಂದು ಏಕವಚನದಲ್ಲಿ ವಾಗ್ದಾಳಿ ನಡೆಸಿದರು.


» ನಾಲ್ಕನೇ ಪುಟದಲ್ಲಿ


# ಶಿವಲಿಂಗೇಗೌಡ ಕ್ಷೇತ್ರದ ಜನರ ಸಮಸ್ಯೆಗೆ ಸ್ಪಂದಿಸಲಿ

## ವಿದ್ಯುತ್ ಪರಿವರ್ತಕ, ರಾಗಿ ಖರೀದಿಯಲ್ಲಿ ಸಮಸ್ಯೆ | ಎನ್.ಆರ್.ಸಂತೋಷ್ ಆಕ್ರೋಶ

• ಪ್ರಜೋದಯ ವರದಿ

**ಹಾಸನ :** ಬೆಂಗಳೂರಿನಲ್ಲಿ ಕುಳಿತು ಇಂಧನ ಬೆಲೆ ಏರಿಕೆ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಲಹೆ ನೀಡುತ್ತಿರುವ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಅದೇ ಕಾಳಜಿಯನ್ನು ಕ್ಷೇತ್ರದ ರೈತರ ಪರ ತೋರಿಸಬೇಕೆಂದು ಜೆಡಿಎಸ್ ಮುಖಂಡ ಎನ್.ಆರ್.ಸಂತೋಷ್ ಅವರು ಛೇಡಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಪಶ್ಚಿಮ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧದಿಂದ ಇಂಧನ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಅದರ ಬಗ್ಗೆ ತಲೆಕೆಡಿಸಿಕೊಂಡಿರುವ ಶಿವಲಿಂಗೇಗೌಡರಿಗೆ ಅರಸೀಕೆರೆಯಲ್ಲಿ ವಿದ್ಯುತ್ ಪರಿವರ್ತಕವಿಲ್ಲದೆ ರೈತರು ಪರದಾಡುತ್ತಿರುವುದು, ರಾಗಿ ಖರೀದಿ ಕೇಂದ್ರದಲ್ಲಿ ಆಗುತ್ತಿರುವ ಭ್ರಷ್ಟಾಚಾರ ಕಣ್ಣಿಗೆ ಕಾಣಿಸುತ್ತಿಲ್ಲವೇ ಎಂದು ಪ್ರಶ್ನಿಸಿದರು.

ಶಾಸಕರು ಇತ್ತೀಚೆಗೆ ಬೆಂಗಳೂರು ಸೇರಿದ್ದಾರೆ. ಯಾವಾಗಲಾದರೊಮ್ಮೆ ಕ್ಷೇತ್ರಕ್ಕೆ ಬಂದು ಹೋಗುತ್ತಾರೆ. ನಾಲ್ಕು ಸಲ ಮತ ನೀಡಿರುವ ಜನರಿಗೆ ಅನ್ಯಾಯ ಮಾಡುವುದು ಸರಿಯಲ್ಲ. ತಾಲ್ಲೂಕಿನಲ್ಲಿ 63 ಕೆ.ವಿ. ಸಾಮರ್ಥ್ಯದ



15, 100 ಕೆ.ವಿ.ಯ 15, 23 ಕೆ.ವಿ. ಸಾಮರ್ಥ್ಯ 18 ವಿದ್ಯುತ್ ಪರಿವರ್ತಕಗಳ ಅವಶ್ಯಕತೆ ಇದೆ. ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರು, ಜಾನುವಾರುಗಳ ಮೇವಿಗೆ ಭಾರೀ ಸಮಸ್ಯೆಯಾಗಿದೆ. ನೀರಿನ ಅಭಾವದಿಂದ ತೆಂಗು, ಅಡಿಕೆ, ರಾಗಿ ಬೆಳೆಗೆ ತೊಂದರೆಯುಂಟಾಗಿದೆ ಎಂದರು.

**ರಾಗಿ ಖರೀದಿಯಲ್ಲಿ ಭಾರೀ ಅಕ್ರಮ**

ನ್ಯಾಫೆಡ್ ಮೂಲಕ ರಾಗಿ ಖರೀದಿ ಮಾಡಲಾಗುತ್ತಿದೆಯಾದರೂ ಅಲ್ಲಿ ನಡೆಯುತ್ತಿರುವ ಅಕ್ರಮಕ್ಕೆ ರೈತರು ಬೇಸತ್ತಿದ್ದಾರೆ. ಎಪಿಎಂಸಿ ಒಳಗೆ ಕಾಲಿಡಬೇಕೆಂದರೂ ಕಾವಲುಗಾರನಿಗೆ 100 ರೂ. ಲಂಚ ಕೊಡಲೇಬೇಕು. ಶಾಸಕ ಶಿವಲಿಂಗೇಗೌಡ ಅವರನ್ನು ರಾಗಿ ಕಳ್ಳ ಎಂದು ಕರೆಯಲು ಇದೇ ಕಾರಣ. ಆದ್ದರಿಂದ ಅವರ ರಾಗಿ ಖರೀದಿ ಪ್ರಕ್ರಿಯೆಯನ್ನು ಸಿಬಿಐ ತನಿಖೆಗೆ ವಹಿಸಿ ಆರೋಪ ಮುಕ್ತರಾಗಲಿ ಎಂದು ಸವಾಲೆಸೆದರು.

ಇಂತಹ ಕೆಟ್ಟ ಸರ್ಕಾರ ಹಾಗು ಅಧಿಕಾರಿಗಳನ್ನು ಅರಸೀಕೆರೆ ಯಾವತ್ತೂ ನೋಡಿರಲಿಲ್ಲ. ಜನರಿಗೆ ನೆರವಾಗುವ ನೆಪದಲ್ಲಿ ಜನ ಸಂಪರ್ಕ ಸಭೆ ಮಾಡಿ ಅಧಿಕಾರಿಗಳು ದೊಡ್ಡ ಜಾತ್ರೆ ಮಾಡುತ್ತಾರೆ. 25 ಸಾರ್ವಜನಿಕರಿದ್ದರೆ 100 ಪೊಲೀಸರು ಇರುತ್ತಾರೆ. ಜನರಲ್ಲಿ ಭಯ ಮೂಡಿಸುವುದೇ ಈ ಸರ್ಕಾರದ ಕೆಲಸವಾಗಿದೆ ಎಂದರು.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಜಿಲ್ಲೆಯ ಹೆಮ್ಮೆಯಾಗಿದ್ದು, ಗಂಡಸಿ ಹ್ಯಾಂಡ್ ಪೋಸ್ಟ್‌ನಲ್ಲಿ ಅವರ ಕಂಚಿನ ಪುತ್ಥಳಿ ನಿರ್ಮಿಸಬೇಕು. ಗಂಡಸಿ ಸಂತೆಯಲ್ಲಿ ನೀರು-ಮಜ್ಜಿಗೆ ಮಾರಾಟ ಮಾಡಿಕೊಂಡಿದ್ದ ಶಿವಲಿಂಗೇಗೌಡ ಅವರನ್ನು ದೇವೇಗೌಡರು ಶಾಸಕನನ್ನಾಗಿ ಬೆಳೆಸಿದ್ದಾರೆ. ಆದ್ದರಿಂದ ಶೀಘ್ರ ಪುತ್ಥಳಿ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು. ಒಂದು ವೇಳೆ ಜಿಲ್ಲಾಡಳಿತ ಅಥವಾ ತಾಲ್ಲೂಕು ಆಡಳಿತ ಕ್ರಮ ಕೈಗೊಳ್ಳದಿದ್ದರೆ ದೇವೇಗೌಡರ ಅಭಿಮಾನಿಗಳೇ ಮನೆ ಮನೆಯಿಂದ ಹಣ ಸಂಗ್ರಹಿಸಿ ಕಾಮಗಾರಿ ಕೈಗೆತ್ತಿಕೊಳ್ಳುತ್ತೇವೆಂದರು.

ಮುಖಂಡರಾದ ಮಹಾಲಿಂಗಣ್ಣ, ಭಾಸ್ಕರ್, ಉಮೇಶ್, ಬೋಜಾನಾಯ್ಕ, ಅಮ್ಮನಟ್ಟಿ ಅಜ್ಜಪ್ಪ ಇದ್ದರು.

# ಸಕಲೇಶಪುರ ಸೌಂದರ್ಯ ಹಾಳು ಮಾಡುತ್ತಿರುವ ಕಸದ ರಾಶಿ

## ಜಾಗೃತಿಗೆ ಎಚ್ಚೆತ್ತುಕೊಳ್ಳದ ಜನರು | ರಸ್ತೆಗಳೆಲ್ಲವೂ ದುರ್ನಾತ

• ಪ್ರಜೋದಯ ವರದಿ

**ಸಕಲೇಶಪುರ:** ದಟ್ಟ ಕಾಡು, ಸುಂದರ ಪರಿಸರದ ಮೂಲಕ ಪ್ರವಾಸಿಗರ ಸ್ವರ್ಗ ಎನಿಸಿಕೊಂಡಿರುವ ಸಕಲೇಶಪುರ ಪಟ್ಟಣದಲ್ಲಿ ರಸ್ತೆ ಬದಿ ಅಧಿಕ ಪ್ರಮಾಣದಲ್ಲಿ ಕಸ ಸುರಿಯುತ್ತಿರುವುದರಿಂದ ಸೌಂದರ್ಯಕ್ಕೆ ಧಕ್ಕೆಯುಂಟಾಗಿದೆ.

ಸಾಕಷ್ಟು ವರ್ಷಗಳ ಪ್ರಹಸನದ ಬಳಿಕ ಪುರಸಭೆಯು ತಾಲ್ಲೂಕಿನ ಮಳಲಿ ಗ್ರಾಮದಲ್ಲಿ ತ್ಯಾಜ್ಯ ವಿಲೇವಾರಿ ಘಟಕ ಆರಂಭಿಸಿದೆ. ಪಟ್ಟಣದ ತ್ಯಾಜ್ಯವೆಲ್ಲಾ ವಿಲೇವಾರಿಯಾಗಿ ಇನ್ನಾದರೂ ಸ್ವಚ್ಛತೆ ಮೂಡುತ್ತದೆ ಎಂಬ ನಿರೀಕ್ಷೆ ಸಂಪೂರ್ಣ ಹುಸಿಯಾಗಿದ್ದು, ಮುಖ್ಯ ರಸ್ತೆಗಳಲ್ಲಾ ದುರ್ನಾತ ಬೀರುತ್ತಿವೆ.

ತ್ಯಾಜ್ಯ ವಿಲೇವಾರಿ ಘಟಕ ಉದ್ಘಾಟನೆ ನಂತರ ಹಸಿ ಹಾಗು ಒಣ ಕಸ ವಿಂಗಡಿಸುವ ಪ್ರಕ್ರಿಯೆಗೆ ಚಾಲನೆ ನೀಡಿದ ಪುರಸಭೆ ಅಧಿಕಾರಿಗಳು ಅದಕ್ಕಾಗಿ ನಿತ್ಯ ಆಟೋ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೆ. ಆದರೆ, ಪುರಸಭೆಯ ನೈರ್ಮಲ್ಯದ ಪ್ರಯತ್ನಕ್ಕೆ ಸಾರ್ವಜನಿಕರು ಜಿದ್ದಿಗೆ ಬಿದ್ದವರಂತೆ ಅನೈರ್ಮಲ್ಯ ಹರಡುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ.

**ಎಲ್ಲೆಲ್ಲೂ ತ್ಯಾಜ್ಯದ ರಾಶಿ**

ಪಟ್ಟಣದಲ್ಲಿ ನಿತ್ಯ ಆಟೋಗಳಲ್ಲಿ ತ್ಯಾಜ್ಯ ಸಂಗ್ರಹ ಮಾಡುತ್ತಿರುವುದಲ್ಲದೆ ಹಸಿ ಹಾಗು ಒಣ ಕಸ ವಿಂಗಡಿಸಿ ಆಟೋಗಳಿಗೆ ನೀಡುವಂತೆ ವಿನಂತಿ ಮಾಡಲಾಗುತ್ತಿದೆ. ಆದರೂ ಪಟ್ಟಣದ ಹಲವೆಡೆ ರಸ್ತೆಬದಿ ಕಸ ಎಸೆಯುವವರ ಸಂಖ್ಯೆ ಏರಿಕೆಯಾಗುತ್ತಿದ್ದು, ಕಸವನ್ನು ಬೀದಿ ನಾಯಿ



ಗಳು ರಸ್ತೆಗೆ ಎಳೆದು ತಂದು ಹಾಕುತ್ತಿರುವುದರಿಂದ ಅನೈರ್ಮಲ್ಯ ತಾಂಡವವಾಡುತ್ತಿದೆ. ಪಟ್ಟಣದಲ್ಲಿ ಮನೆ ಮನೆ ತ್ಯಾಜ್ಯ ಸಂಗ್ರಹ ಮಾಡಲಾಗುತ್ತಿದ್ದರೂ ಉತ್ತರ ಭಾರತೀಯರು ನಿಯಮ ಪಾಲಿಸುತ್ತಿಲ್ಲವೆಂಬುದು ಬಹಿರಂಗ ಸತ್ಯವಾಗಿದೆ. ರೈಲ್ವೆ ಇಲಾಖೆ ಹಾಗು ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಸಾಕಷ್ಟು ಉತ್ತರ ಭಾರತದ ಕುಟುಂಬಗಳು ಪಟ್ಟಣದಲ್ಲಿ ನೆಲೆಸಿವೆ. ಸಮಯವಲ್ಲದ ಸಮಯದಲ್ಲಿ ಅವರು ಕೆಲಸಕ್ಕೆ ತೆರಳುವುದರಿಂದ ತ್ಯಾಜ್ಯ ಸಂಗ್ರಹಿಸುವ ಆಟೋಗಳು ಬಂದಾಗ ಮನೆಯಲ್ಲಿ ಇರುವುದಿಲ್ಲ. ಇದ್ದರೂ ಆಟೋಗಳಿಗೆ ನೀಡುವ ಪರಿಪಾಠ ಬೆಳೆಸಿಕೊಂಡಿಲ್ಲ. ಹೀಗಾಗಿ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ರಸ್ತೆಗೆ ಎಸೆಯುತ್ತಾರೆ.

**ಜಾಗೃತಿಗೆ ಇಲ್ಲ ಬೆಲೆ**

ಆಟೋಗಳ ಮೂಲಕ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದ್ದರೂ ಅದರಿಂದ ಸಾರ್ವಜನಿಕರು ಪಾಠ ಕಲಿತಂತೆ ಕಾಣಿಸುತ್ತಿಲ್ಲ. ಕದ್ದು ಮುಚ್ಚಿ ತಂದು ರಸ್ತೆಗೆ ತ್ಯಾಜ್ಯ ಎಸೆಯುವ ಪ್ರದೇಶವನ್ನು ಪುರಸಭೆ ಸಿಬ್ಬಂದಿ ಸಿಂಗರಿಸಿ ಪ್ಲಾಸ್ಟಿಕ್ ಬಾಟಲ್‌ಗಳಿಗೆ ಬಣ್ಣ ಹಚ್ಚಿ ಪ್ರದೇಶವನ್ನು ಶುಚಿಯಾಗಿಟ್ಟರೂ ಒಂದೆರಡು ದಿನಗಳಲ್ಲಿ ತ್ಯಾಜ್ಯದ ರಾಶಿಯಿಂದ ರಾರಾಜಿಸುತ್ತಿದೆ.

**ಕಸಕ್ಕೆ ಬೆಂಕಿ**

ಪಟ್ಟಣದ ಕೈಗಾರಿಕಾ ಪ್ರದೇಶ ಸೇರಿ ಹಲವೆಡೆ ರಸ್ತೆಬದಿ ಹಾಕುವ ತ್ಯಾಜ್ಯವನ್ನು ಎತ್ತಲು ಪುರಸಭೆ ಸಿಬ್ಬಂದಿ ಮುಂದಾಗದ ಹಿನ್ನಲೆಯಲ್ಲಿ ವಾರಗಳ ಕಾಲ ಕೊಳೆಯುವ ತ್ಯಾಜ್ಯವನ್ನು ಒಂದೆಡೆ ರಾಶಿ ಮಾಡಿ ಬೆಂಕಿ ಹಾಕುವ ಪ್ರಕ್ರಿಯೆ ನಡೆದಿದೆ. ವಾರಗಳ ಕಾಲ ಉರಿಯುವ ಬೆಂಕಿ ಹಾಗು ಹೊಗೆಯಿಂದ ಜನರು ಮೂಗು ಹಿಡಿದು ಸಂಚರಿಸುವಂತಾಗಿದೆ.

ತ್ಯಾಜ್ಯವಿಲೇವಾರಿ ಘಟಕ ಆರಂಭವಾದ ನಂತರ ಪಟ್ಟಣದ ಸುಭಾಷ್ ಮೈದಾನ ಸಮೀಪದ ಹಳೇ ಸಂತೆ ಮೈದಾನದಲ್ಲಿ ತ್ಯಾಜ್ಯ ವಿಲೇವಾರಿ ನಿಲುಗಡೆಯಾಗಿದೆ. ಕಳೆದ ಎರಡು ವರ್ಷಗಳ ಸಂತೆ ಮೈದಾನದಲ್ಲಿ ಹಾಕಲಾಗಿದ್ದ ತ್ಯಾಜ್ಯ ಬೆಟ್ಟದಂತಾಗಿದೆ. ಈ ಬೆಟ್ಟದಂತ ತ್ಯಾಜ್ಯ ವಿಲೇವಾರಿಗೆ ಖಾಸಗಿ ಕಂಪನಿ ಟೆಂಡರ್ ಸಹ ಪಡೆದಿದೆ. ಆದರೆ ಈ ಮಧ್ಯೆ ಕಿಡಿಗೇಡಿಗಳು ತ್ಯಾಜ್ಯದ ಬೆಟ್ಟಕ್ಕೆ ಬೆಂಕಿ ಹಾಕಿದ್ದು, ಬೆಂಕಿ ಕೆಲ ದಿನಗಳ ಕಾಲ ಧಗಧಗಿಸುತ್ತಿತ್ತು. ಬೆಂಕಿ ನಂದಿಸಲು ಪುರಸಭೆ ಹಲವು ಪ್ರಯತ್ನ ನಡೆಸಿತ್ತಾದರೂ ಇಂದಿಗೂ ಬೆಂಕಿ ಹೊಗೆಯಾಡುತ್ತಿದೆ. ಅದರಿಂದಾಗಿ ಸಂತೆ ಮೈದಾನದಲ್ಲಿದ್ದ ಹತ್ತಕ್ಕೂ ಅಧಿಕ ಮರಗಳು ಶಾಖಕ್ಕೆ ಒಣಗಿವೆ.

ಈ ಕುರಿತು ಚಾಮುಂಡೇಶ್ವರಿ ಬಡಾವಣೆ ನಿವಾಸಿ ಯೋಗೇಶ್ ಅವರು ಮಾತನಾಡಿ, ಉತ್ತರ ಭಾರತದ ಜನರಲ್ಲಿ ನೈರ್ಮಲ್ಯದ ಕಲ್ಪನೆ ಇಲ್ಲ. ಎಲ್ಲೆಂದರಲ್ಲಿ ತ್ಯಾಜ್ಯ ಹಾಕುತ್ತಿರುವುದರಿಂದ ಜನರು ತ್ಯಾಜ್ಯದ ರಾಶಿಯ ಮಧ್ಯೆ ಸಂಚರಿಸುವಂತೆ. ಪುರಸಭೆ ತಪ್ಪಿತಸ್ಥರಿಗೆ ದಂಡ ವಿಧಿಸಿ ಬಿಸಿ ಮುಟ್ಟಿಸಬೇಕೆಂದು ಹೇಳಿದರು.

# ಕ್ರಿಕೆಟ್ ಸಮ್ಮಿಲನ ಯಶಸ್ಸು: ಅಭಿನಂದನೆ

• ಪ್ರಜೋದಯ ವರದಿ

**ಹಾಸನ:** ನಗರದ ಸರ್ಕಾರಿ ಕಲಾ ಹಾಗು ವಿಜ್ಞಾನ ಕಾಲೇಜು ಆವರಣದಲ್ಲಿ ಮೇ 9 ಮತ್ತು 10ರಂದು ಹಮ್ಮಿಕೊಂಡಿದ್ದ ಪತ್ರಕರ್ತರು- ಅಧಿಕಾರಿಗಳ ಕ್ರಿಕೆಟ್ ಸಮ್ಮಿಲನ ಪಂದ್ಯಾವಳಿ ಯಶಸ್ಸಿಗೆ ಶ್ರಮಿಸಿದ್ದ ಪತ್ರಕರ್ತರನ್ನು ಬುಧವಾರ ಅಭಿನಂದಿಸಲಾಯಿತು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅವರು ಮಾತನಾಡಿ, ಮಾದರಿ ಕ್ರೀಡಾಕೂಟ ಆಯೋಜಿಸಬೇಕೆನ್ನುವುದು ನಮ್ಮ





ಉದ್ದೇಶವಾಗಿತ್ತು. ಯಾವುದೇ ಲೋಪದೋಷಗಳು ಆಗದಂತೆ ಕ್ರೀಡಾ ಸಮಿತಿ ರಚಿಸಿ ಪ್ರತಿಯೊಬ್ಬರಿಗೂ ಜವಾಬ್ದಾರಿ ನೀಡಲಾಗಿತ್ತು. ಎಲ್ಲಾ ಪತ್ರಕರ್ತರು ಮನೆಯ ಕೆಲಸದಂತೆ ಅಚ್ಚುಕಟ್ಟಾಗಿ ನಿಬಾಯಿಸಿ ಯಶಸ್ಸಿಗೆ ಸಹಕರಿಸಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಊಟ-ಉಪಾಹಾರ ನಿರ್ವಹಣೆಯನ್ನು ಎಂ.ಎಸ್.ಸ್ವಾಗತ್ ಮತ್ತವರ ತಂಡ ನಿರ್ವಹಿಸಿತು. ಪಿಚ್ ಜವಾಬ್ದಾರಿಯನ್ನು ಸಾಗರ್, ಶರತ್ ಇತರರಿಗೆ ವಹಿಸಲಾಗಿತ್ತು. ನಟರಾಜ್ ಅವರು ಫ್ಲೆಕ್ಸ್, ಸ್ವಚ್ಛತೆಯನ್ನು ಗಮನಿಸಿದರು. ಸಂಘಟಿತರಾಗಿ ಮಾಡುವ ಕೆಲಸ ಯಶಸ್ಸು ತಂದುಕೊಡುತ್ತವೆ ಎಂಬುದಕ್ಕೆ ಕ್ರಿಕೆಟ್ ಪಂದ್ಯಾವಳಿ ನಿದರ್ಶನವೆಂದರು.

ಸಂಘದ ಜಿಲ್ಲಾಧ್ಯಕ್ಷ ಜೆ.ಆರ್. ಕೆಂಚೇಗೌಡ ಅವರು ಮಾತನಾಡಿ, ಎರಡು ದಿನಗಳ ಕ್ರೀಡಾಕೂಟ ಅಚ್ಚುಕಟ್ಟಾಗಿ ನಡೆಯಿತು. ವಹಿಸಿದ ಕೆಲಸವನ್ನು ಎಲ್ಲರೂ ಉತ್ತಮವಾಗಿ ನಿರ್ವಹಿಸಿದರು. ಮುಂದೆಯೂ ಕ್ರೀಡಾಕೂಟಗಳನ್ನು ಇದೇ ಮಾದರಿಯಲ್ಲಿ ಹಮ್ಮಿಕೊಳ್ಳೋಣವೆಂದರು.

ಉಪಾಧ್ಯಕ್ಷ ಎನ್.ನಂಜುಂಡೇಗೌಡ ಅವರು ಮಾತನಾಡಿ, ಕ್ರಿಕೆಟ್ ಸಮ್ಮಿಲನ ಯಶಸ್ವಿಯಾಗಿ ನಡೆದಿದೆ. ಹಿಂದೆ ಈ ರೀತಿಯ ಕ್ರೀಡಾಕೂಟ ನಡೆದಿರಲಿಲ್ಲವೆಂದು ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ಶ್ರೇಯಸ್ಸಿಗೆ ಕ್ರೀಡಾ ಸಮಿತಿಯ ಎಲ್ಲರೂ ಕಾರಣ.


» ನಾಲ್ಕನೇ ಪುಟದಿಂದ


# ಎಂಎಲ್‌ಸಿ ವಿಶ್ವನಾಥ್ ವಿರುದ್ಧ ಎಫ್‌ಐಆರ್

• ಪ್ರಜೋದಯ ವರದಿ

**ಮೈಸೂರು:** ಸಾಲದ ಹಣ ಕೇಳಲು ಹೋದ ವ್ಯಕ್ತಿ ಮೇಲೆ ವಿಧಾನ ಪರಿಷತ್ ಸದಸ್ಯ ಅಡಗೂರು ವಿಶ್ವನಾಥ್ ಹಲ್ಲೆ ನಡೆಸಿದ್ದಾರೆಂಬ ಆರೋಪ ಕೇಳಿಬಂದಿದ್ದು, ಅವರ ವಿರುದ್ಧ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಲದರ್ಶಿನಿಯಲ್ಲಿ ವಿಶ್ವನಾಥ್ ಅವರು ಇರುವಾಗ ಹಣ ಕೇಳಲು ಹೋದ ವೇಳೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದರೆಂದು ಕಾಂಗ್ರೆಸ್ ಮುಖಂಡ ಕೋಟೆಹುಂಡಿ ಮಹದೇವು ಆರೋಪಿಸಿ ನ್ಯಾಯಾಲಯದ ಆದೇಶದಂತೆ ಪ್ರಕರಣ ದಾಖಲಿಸಿದ್ದಾರೆ.

# ಮೆಡಿಕಲ್ ಶಾಪ್‌ಗಳ ಬಂದ್‌ಗೆ ಜಿಲ್ಲೆಯಲ್ಲಿ ನೈತಿಕ ಬೆಂಬಲ

• ಪ್ರಜೋದಯ ವರದಿ

**ಹಾಸನ:** ಆನ್‌ಲೈನ್‌ನಲ್ಲಿ ಔಷಧಿ ಮಾರಾಟವನ್ನು ವಿರೋಧಿಸಿ ಬುಧವಾರ ಅಖಿಲ ಭಾರತ ಔಷಧಿ ಮಾರಾಟಗಾರರ ಸಂಘ ವತಿಯಿಂದ ದೇಶವ್ಯಾಪಿ ಕರೆ ನೀಡಿದ್ದ ಮೆಡಿಕಲ್ ಶಾಪ್‌ಗಳ ಬಂದ್‌ಗೆ ಜಿಲ್ಲೆಯ ಔಷಧಿ ಅಂಗಡಿಗಳ ನೈತಿಕ ಬೆಂಬಲ ವ್ಯಕ್ತಪಡಿಸಿದರು.

ನಗರದಲ್ಲಿ ಕೆಲ ಮೆಡಿಕಲ್ ಶಾಪ್‌ಗಳ ಬಂದ್ ಆಗಿದ್ದು, ಬಹುತೇಕ ಮೆಡಿಕಲ್ ಶಾಪ್‌ಗಳು ತೆರೆದು ಕೈಗೆ ಕಪ್ಪುಪಟ್ಟಿ ಧರಿಸಿ ವ್ಯಾಪಾರ- ವಹಿವಾಟು ನಡೆಸಿದರು. ರೋಗಿಗಳ ಹಿತ ದೃಷ್ಟಿಯಿಂದ ನೈತಿಕ ಬೆಂಬಲ ವ್ಯಕ್ತಪಡಿಸಿ ಮೆಡಿಕಲ್ ಶಾಪ್ ತೆರೆದಿರುವುದಾಗಿ ಮಾಲೀಕರು ತಿಳಿಸಿದ್ದಾರೆ.






ಜಿಲ್ಲೆಯಲ್ಲಿ ಜನೌಷಧಿ ಕೇಂದ್ರ-24, ಮೆಡ್‌ಪ್ಲಸ್-20, ಅಪೊಲೊ-26, ಆಸ್ಪತ್ರೆ ಕೌಂಟರ್ ಮೆಡಿಕಲ್ ಸೇರಿ ಒಟ್ಟು 1,015 ಮೆಡಿಕಲ್ ಶಾಪ್‌ಗಳಿವೆ. ಸಗಟು ಔಷಧ ಮಾರಾಟಗಾರರು ಮಾತ್ರ ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದ್ದು, ರಿಟೇಲ್ ಮಾರಾಟಗಾರರು ನೈತಿಕ ಬೆಂಬಲ ನೀಡಿ ಕೈಗೆ ಕಪ್ಪು ಪಟ್ಟಿ ಧರಿಸಿ ಮೆಡಿಕಲ್ ಶಾಪ್‌ಗಳನ್ನು ತೆರೆದಿದ್ದರು.

ಜಿಲ್ಲಾ ಔಷಧ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಮಾತನಾಡಿ, ಆನ್‌ಲೈನ್‌ನಲ್ಲಿ ನಡೆಯುತ್ತಿರುವ ಔಷಧ ಮಾರಾಟ, ಅತಿಯಾದ ರಿಯಾಯಿತಿ ದರಗಳು ಹಾಗು ನಿಯಮ ಉಲ್ಲಂಘನೆಗಳಿಂದ ಸಣ್ಣ ವ್ಯಾಪಾರಿಗಳು


» ನಾಲ್ಕನೇ ಪುಟದಲ್ಲಿ


# ಮಳೆ ಹಾನಿ ಪ್ರದೇಶಗಳಿಗೆ ಶಾಸಕ ಸುರೇಶ್ ಭೇಟಿ



• ಪ್ರಜೋದಯ ವರದಿ

**ಬೇಲೂರು:** ಗುಡುಗು-ಸಿಡಿಲು ಸಹಿತ ಸುರಿದ ಬಿರುಗಾಳಿ ಮಳೆಯ ಅಬ್ಬರಕ್ಕೆ ತಾಲ್ಲೂಕಿನ ರಾಜನ ಶಿರಿಯೂರು ಗ್ರಾಮದಲ್ಲಿ ವಿದ್ಯುತ್ ಪರಿವರ್ತಕ, ವಿದ್ಯುತ್ ಕಂಬ ಗಳು ಹಾಗು ಮರಗಳು ನೆಲಕ್ಕುರುಳಿ ಅಪಾರ ಪ್ರಮಾಣದ ಬೆಳೆ ಹಾನಿ ಸಂಭವಿಸಿದೆ. ಶಾಸಕ ಹೆಚ್.ಕೆ. ಸುರೇಶ್ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಗ್ರಾಮಕ್ಕೆ ಭೇಟಿ ನೀಡಿ ಹಾನಿ ಪ್ರದೇಶವನ್ನು ಪರಿಶೀಲಿಸಿದರು.

ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಲ್ಲಿ ಸಂಚರಿಸಿದ ಶಾಸಕ ಸುರೇಶ್ ಅವರು ಸೆಸ್ಕ್, ಕೃಷಿ, ತೋಟಗಾರಿಕೆ ಹಾಗು ಅರಣ್ಯ ಇಲಾಖೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಸಾರ್ವಜನಿಕರಿಂದಲೂ ಸಮಸ್ಯೆಗಳ ಕುರಿತು ವಿವರಗಳನ್ನು ಆಲಿಸಿದರು.

ಈ ವೇಳೆ ಮಾತನಾಡಿದ ಅವರು, ಗ್ರಾಮದಲ್ಲಿ ವಿದ್ಯುತ್ ಕಂಬಗಳು ಧರೆಗೆ ಉರುಳಿರುವುದರಿಂದ


» ನಾಲ್ಕನೇ ಪುಟದಲ್ಲಿ


## ಗಜಪಡೆ ಸಂಘರ್ಷವಿರುವ 40 ಸರ್ಕಾರಿ ಶಾಲೆಗಳಲ್ಲಿ 800ಕ್ಕೂ ಹೆಚ್ಚು ವಿದ್ಯಾರ್ಥಿಗಳ ಕಲಿಕೆ

# ಕಾಡಾನೆ ಪೀಡಿತ ಪ್ರದೇಶದ ಮಕ್ಕಳ ವಿದ್ಯಾಭ್ಯಾಸ ಅತಂತ್ರ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಕಾಡಾನೆ-ಮಾನವ ಸಂಘರ್ಷದಿಂದ ಶಾಲಾ ಮಕ್ಕಳ ಭವಿಷ್ಯ ಅತಂತ್ರ ಸ್ಥಿತಿಗೆ ತಲುಪಿದೆ. ಕಾಡಾನೆ ಹಾವಳಿ ಇರುವ ಸಕಲೇಶಪುರ, ಬೇಲೂರು, ಆಲೂರು, ಅರಕಲಗೂಡು ತಾಲ್ಲೂಕಿನಲ್ಲಿ ಒಟ್ಟು 40ಕ್ಕೂ ಹೆಚ್ಚು ಶಾಲೆಗಳ 800ಕ್ಕೂ ಹೆಚ್ಚು ಮಕ್ಕಳ ವಿದ್ಯಾಭ್ಯಾಸ ಜೀವಭಯದಲ್ಲೇ ನಡೆಯಬೇಕಿದೆ.

ಸಕಲೇಶಪುರ ತಾಲ್ಲೂಕಿನಲ್ಲಿ 15 ಸರ್ಕಾರಿ ಪ್ರಾಥಮಿಕ ಶಾಲೆಗಳು ಕಾಡಾನೆ ಪೀಡಿತ ಪ್ರದೇಶಗಳಲ್ಲೇ ಇವೆ. ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ 282 ಮಕ್ಕಳು ಕಾಡಾನೆಗಳ ಭಯದಲ್ಲೇ 2 ರಿಂದ 3 ಕಿಲೋ ಮೀಟರ್ ದೂರ ಶಾಲೆಗೂ ಮನೆಗೂ ನಡೆದುಕೊಂಡೇ ಓಡಾಡಬೇಕಿದೆ. ಅದೇ ರೀತಿ ಬೇಲೂರು





ತಾಲ್ಲೂಕಿನ 8 ಶಾಲೆಯ 240 ಮಕ್ಕಳು, ಅರಕಲಗೂಡು ತಾಲ್ಲೂಕಿನ 9 ಶಾಲೆಗಳ 183 ಮಕ್ಕಳು, ಆಲೂರು ತಾಲ್ಲೂಕಿನ 8 ಶಾಲೆಯ 120ಕ್ಕೂ ಹೆಚ್ಚು ಮಕ್ಕಳು ಸಾರಿಗೆ ಬಸ್ ಸೌಲಭ್ಯ ಇಲ್ಲದಿವುದರಿಂದ ಪ್ರತಿನಿತ್ಯ ಶಾಲೆಗೆ ನಡೆದುಕೊಂಡೇ ಹೋಗಬೇಕಾದ ಸ್ಥಿತಿ ನಿರ್ಮಾಣವಾಗಿದೆ.

**ಯಾವ್ಯಾವ ಶಾಲೆಗಳು**

ಸಕಲೇಶಪುರ ತಾಲ್ಲೂಕಿನ ಸರ್ಕಾರಿ ಪ್ರಾಥಮಿಕ ಶಾಲೆ ಮೂಗಲಿ, ಹೆಬ್ಬನಹಳ್ಳಿ, ಕಾಕನಮನೆ, ಹೊಸಪೇಟೆ, ಹೆಗ್ಗದೆ, ಕಡಗರವಳ್ಳಿ, ದೊಡ್ಡನಗರ, ಜನ್ನಾಪುರ ದಿಣ್ಣೇಕೆರೆ, ಜನ್ನಾಪುರ, ವಣಗೂರು, ಕೆರೋಡಿ, ಬಾಳೆಕೆರೆ, ದೊಡ್ಡಕುಂದೂರು, ಸುಳ್ಳಕ್ಕಿ ಸೇರಿ ಇನ್ನೂ

**ವಾಹನ ಸೌಲಭ್ಯ ಕಲ್ಪಿಸಲು ಆಗ್ರಹ**

ಮಲೆನಾಡು ಪ್ರದೇಶದಲ್ಲಿ ಶಾಲೆಗೂ ಮನೆಗೂ ಬಹಳ ದೂರವಿರುತ್ತದೆ. ಕಾಫಿ ತೋಟ, ಅರಣ್ಯ ಪ್ರದೇಶ ವ್ಯಾಪ್ತಿಯ ರಸ್ತೆಯಲ್ಲೇ ಮಕ್ಕಳು ಶಾಲೆಗೆ ತೆರಳಬೇಕಿರುವುದರಿಂದ ಪ್ರತಿದಿನ ಕಾಡಾನೆ ಎದುರಾಗುವ ಭಯದಲ್ಲೇ ಶಾಲೆಗೆ ತೆರಳಬೇಕಿದೆ. ಹೀಗಾಗಿ ಶಿಕ್ಷಣ ಇಲಾಖೆಯಿಂದ ಕಾಡಾನೆ ಪೀಡಿತ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳಿಗೆ ವಾಹನ ಸೌಲಭ್ಯ ಕಲ್ಪಿಸಬೇಕೆಂದು ಪೋಷಕರು ಒತ್ತಾಯಿಸಿದ್ದಾರೆ.

ಹಲವು ಗ್ರಾಮಗಳಲ್ಲಿರುವ ಶಾಲೆಗಳು ಕಾಡಾನೆ ಹಾವಳಿ ಇರುವ ಪ್ರದೇಶದಲ್ಲೇ ಇವೆ.

ಬೇಲೂರು ತಾಲ್ಲೂಕಿನ ಗೆಂಡೇಹಳ್ಳಿ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆ, ಕಲ್ಲೇರಿ, ಬಿಕ್ಕೋಡು, ಹೊಸ್ಕೂರು, ಚಿಕ್ಕ ಬಿಕ್ಕೋಡು, ಅರಕವಳ್ಳಿ ಹಾಗು ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣ, ಶಿರದನಹಳ್ಳಿ, ಮಾಸವತ್ತೂರು, ಆಲದನಹಳ್ಳಿ, ಹಿಪ್ಪಲಿ, ಕೋಟೆ, ಮದಲಾಪುರ, ಮಾಗೋಡು, ಆಲೂರು ತಾಲ್ಲೂಕಿನ 8ಕ್ಕೂ ಹೆಚ್ಚು ಗ್ರಾಮಗಳಲ್ಲಿರುವ ಸರ್ಕಾರಿ ಶಾಲೆಗಳ ಮಕ್ಕಳು ಪ್ರತಿನಿತ್ಯ ಕಾಡಾನೆಯ ಭಯದಲೇ ಶಾಲೆಗೆ ತೆರಳಬೇಕಿದೆ. ಇದು ಚಿಕ್ಕ ಮಕ್ಕಳ ಕಲಿಕೆಗೆ ಹಿನ್ನಡೆಯುಂಟು ಮಾಡಿದೆ. ಅಲ್ಲದೇ ಕಾಡಾನೆ ಹಾವಳಿಯಿಂದ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂದೇಟು ಹಾಕುವಂತಾಗಿದೆ.

**ಬಡವರ ಮಕ್ಕಳ ಬದುಕು ಅತಂತ್ರ**

ಗ್ರಾಮೀಣಾ ಭಾಗದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳನ್ನು ಓದಿಸುವ ಬಹುತೇಕ ಪೋಷಕರು


» ನಾಲ್ಕನೇ ಪುಟದಲ್ಲಿ

ಕೈಗಾರಿಕಾ ಕ್ಷೇತ್ರದಲ್ಲಿ ಪ್ರಬಲ ಶಕ್ತಿಯಾಗಿ ಇಟಲಿ ಹೊಂದಿರುವ ಸ್ಥಾನವನ್ನು ಬಿಂಬಿಸುವ ಇಟಾಲಿಯನ್ ವಿನ್ಯಾಸ, ಅತ್ಯುತ್ತಮ ಉತ್ಪಾದನಾ ಸಾಮರ್ಥ್ಯ ಹಾಗೂ ವಿಶ್ವದರ್ಜೆಯ ಸೂಪರ್ ಕಂಪ್ಯೂಟರ್‌ಗಳನ್ನು; ಭಾರತದ ತ್ವರಿತ ಆರ್ಥಿಕ ಪ್ರಗತಿ, ಎಂಜಿನಿಯರಿಂಗ್ ಪ್ರತಿಭೆ, ಬೃಹತ್ ಮಾರುಕಟ್ಟೆ ಹಾಗೂ 100ಕ್ಕೂ ಹೆಚ್ಚು ಯುನಿಕಾರ್ನ್‌ಗಳು ಮತ್ತು 200000 ನವೋದ್ಯಮಗಳನ್ನು ಒಳಗೊಂಡ ನಾವೀನ್ಯತೆಯ ಪರಿಸರ ವ್ಯವಸ್ಥೆಯೊಂದಿಗೆ ಸಂಯೋಜಿಸಿ ಒಂದು ಪ್ರಬಲ ಸಮನ್ವಯತೆಯನ್ನು ರೂಪಿಸುವ ಗುರಿಯನ್ನು ನಾವು ಹೊಂದಿದ್ದೇವೆ.

# ಇಟಲಿ, ಭಾರತ: ಉಭಯ ದೇಶಗಳ ಮಧುರ ಬಾಂಧವ್ಯದ ಬುನಾದಿ

ಸ್ನೇಹಹಸ್ತ

ನರೇಂದ್ರ ಮೋದಿ, ಜಾರ್ಜಿಯಾ ಮೆಲೊನಿ

ಭಾರತ ಮತ್ತು ಇಟಲಿ ದೇಶಗಳ ನಡುವಿನ ಸಂಬಂಧವು ಈಗ ಒಂದು ಪ್ರಮುಖ ಹಂತ ತಲುಪಿದೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ನಡುವಿನ ಬಾಂಧವ್ಯವು ಅಭೂತಪೂರ್ವ ವೇಗದಲ್ಲಿ ಬೆಳೆದಿದೆ. ಕೇವಲ ಸಾಮಾನ್ಯ ಸ್ನೇಹವಾಗಿದ್ದ ನಮ್ಮ ಒಡನಾಟ, ಈಗ ಸ್ವಾತಂತ್ರ್ಯ, ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ಭವಿಷ್ಯದ ಸಮಾನ ದೃಷ್ಟಿಕೋನವನ್ನು ಆಧರಿಸಿದ ಒಂದು ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯಾಗಿ ಬದಲಾಗಿದೆ.

ಜಾಗತಿಕ ವ್ಯವಸ್ಥೆಯು ದೊಡ್ಡ ಬದಲಾವಣೆಗೆ ಒಳಗಾಗುತ್ತಿರುವ ಈ ಸಮಯದಲ್ಲಿ, ಭಾರತ ಮತ್ತು ಇಟಲಿ ನಡುವಿನ ಪಾಲುದಾರಿಕೆಯು ಉನ್ನತ ರಾಜಕೀಯ ಹಾಗೂ ಸಾಂಸ್ಥಿಕ ಮಟ್ಟದ ನಿಯಮಿತ ಭೇಟಿ ಮತ್ತು ಮಾತುಕತೆಗಳಿಂದ ಮುನ್ನಡೆಯುತ್ತಿದೆ. ಇದು ನಮ್ಮ ಆರ್ಥಿಕ ಚೈತನ್ಯ, ಸಾಮಾಜಿಕ ಸೃಜನಶೀಲತೆ ಮತ್ತು ಸಾವಿರಾರು ವರ್ಷಗಳ ಹಳೆಯ ನಾಗರಿಕತೆಯ ಜ್ಞಾನವನ್ನು ಒಟ್ಟುಗೂಡಿಸುವ ಒಂದು ಹೊಸ ಹಾಗೂ ಉನ್ನತ ಆಯಾಮವನ್ನು ಪಡೆದುಕೊಳ್ಳುತ್ತಿದೆ.

21 ಶತಮಾನದ ಪ್ರಗತಿ ಮತ್ತು ಭದ್ರತೆಯು–ಹೊಸ ಆವಿಷ್ಕಾರಗಳನ್ನು ಮಾಡುವ, ಇಂಧನ ಪರಿವರ್ತನೆಯನ್ನು ಸರಿಯಾಗಿ ನಿರ್ವಹಿಸುವ ಮತ್ತು ತನ್ನ ದೇಶದ ಸಾರ್ವಭೌಮತ್ವವನ್ನು ಬಲಪಡಿಸುವ ರಾಷ್ಟ್ರಗಳ ಸಾಮರ್ಥ್ಯದ ಮೇಲೆ ನಿರ್ಧಾರವಾಗುತ್ತದೆ ಎಂಬ ಸಾಮೂಹಿಕ ಅರಿವು ನಮ್ಮ ಸಹಕಾರದಲ್ಲಿದೆ.

ಈ ಉದ್ದೇಶಕ್ಕಾಗಿ, ಹೊಸ ಗುರಿಗಳನ್ನು ತಲುಪಲು ಮತ್ತು ನಮ್ಮ ಪರಸ್ಪರ ಪೂರಕ ಸಾಮರ್ಥ್ಯಗಳನ್ನು ಒಟ್ಟುಗೂಡಿಸುವ ಸಲುವಾಗಿ ನಮ್ಮ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ಗಾಢವಾಗಿ ಸಲು ಹಾಗೂ ವೈವಿಧ್ಯಮಯಗೊಳಿಸಲು ನಾವು ಬದ್ಧರಾಗಿದ್ದೇವೆ.

ಕೈಗಾರಿಕಾ ಕ್ಷೇತ್ರದಲ್ಲಿ ಪ್ರಬಲ ಶಕ್ತಿಯಾಗಿ ಇಟಲಿ ಹೊಂದಿರುವ ಸ್ಥಾನವನ್ನು ಬಿಂಬಿಸುವ ಇಟಾಲಿಯನ್ ವಿನ್ಯಾಸ, ಅತ್ಯುತ್ತಮ ಉತ್ಪಾದನಾ ಸಾಮರ್ಥ್ಯ ಹಾಗೂ ವಿಶ್ವದರ್ಜೆಯ ಸೂಪರ್ ಕಂಪ್ಯೂಟರ್‌ಗಳನ್ನು; ಭಾರತದ ತ್ವರಿತ ಆರ್ಥಿಕ ಪ್ರಗತಿ, ಎಂಜಿನಿಯರಿಂಗ್ ಪ್ರತಿಭೆ, ಬೃಹತ್ ಮಾರುಕಟ್ಟೆ ಹಾಗೂ 100ಕ್ಕೂ ಹೆಚ್ಚು ಯುನಿಕಾರ್ನ್‌ಗಳು ಮತ್ತು 200000 ನವೋದ್ಯಮಗಳನ್ನು ಒಳಗೊಂಡ ನಾವೀನ್ಯತೆಯ ಪರಿಸರ ವ್ಯವಸ್ಥೆಯೊಂದಿಗೆ ಸಂಯೋಜಿಸಿ ಒಂದು ಪ್ರಬಲ ಸಮನ್ವಯತೆಯನ್ನು ರೂಪಿಸುವ ಗುರಿಯನ್ನು ನಾವು ಹೊಂದಿದ್ದೇವೆ.

ಇದು ಕೇವಲ ಎರಡು ವ್ಯವಸ್ಥೆಗಳ ಸಾಮಾನ್ಯ ಜೋಡಣೆಯಲ್ಲ, ಬದಲಿಗೆ ನಮ್ಮ ಕೈಗಾರಿಕಾ ಸಾಮರ್ಥ್ಯಗಳು ಪರಸ್ಪರ ಶಕ್ತಿಯನ್ನು ಹೆಚ್ಚಿಸುವಂತಹ ಒಂದು ಮೌಲ್ಯಾಧಾರಿತ ಸಹ-ಸೃಷ್ಟಿಯಾಗಿದೆ.

ಯುರೋಪಿಯನ್ ಒಕ್ಕೂಟ ಮತ್ತು ಭಾರತದ ನಡುವಿನ ಮುಕ್ತ ವ್ಯಾಪಾರ ಒಪ್ಪಂದವು ಉಭಯ ದೇಶಗಳಲ್ಲಿ ವ್ಯಾಪಾರ ಹಾಗೂ ಹೂಡಿಕೆಯನ್ನು ಹೆಚ್ಚಿಸಲು ದಾರಿ ಮಾಡಿಕೊಡುತ್ತದೆ. ರಕ್ಷಣೆ ಮತ್ತು ಏರೋಸ್ಪೇಸ್, ಹಸಿರು ತಂತ್ರಜ್ಞಾನ, ಯಂತ್ರೋಪಕರಣ, ವಾಹನ ಬಿಡಿಭಾಗ, ರಾಸಾಯನಿಕ, ಔಷಧಿಯ ಉತ್ಪನ್ನ, ಜವಳಿ, ಕೃಷಿ-ಆಹಾರ ಮತ್ತು ಪ್ರವಾಸೋದ್ಯಮ ಸೇರಿದಂತೆ ಪ್ರಮುಖ ವಲಯಗಳ ಮೇಲೆ ವಿಶೇಷ ಗಮನ ಹರಿಸುವ ಮೂಲಕ, 2029ರ ವೇಳೆಗೆ ಭಾರತ ಮತ್ತು ಇಟಲಿ ನಡುವಿನ ವ್ಯಾಪಾರದಲ್ಲಿ 20 ಶತಕೋಟಿ ಯುರೋ ಗುರಿಯನ್ನು ತಲುಪಲು ಹಾಗೂ ಅದನ್ನು ಮೀರಿ ಸಾಧಿಸಲು ನಾವು ಬಯಸುತ್ತೇವೆ.

ಜಗತ್ತಿನಾದ್ಯಂತ ಮೇಡ್-ಇನ್-ಇಟಲಿ ಎಂಬುದು ಯಾವಾಗಲೂ ಅತ್ಯುತ್ತಮ ಗುಣಮಟ್ಟಕ್ಕೆ ಹೆಸರಾಗಿದೆ. ಇಂದು ಅದು ಭಾರತದ ಮೇಕ್-ಇನ್-ಇಟಲಿ ಯೋಜನೆಯ ಉನ್ನತ ಗುಣಮಟ್ಟದ ಗುರಿಗಳೊಂದಿಗೆ ಸ್ವಾಭಾವಿಕವಾಗಿ ಹೊಂದಿಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ, ಭಾರತೀಯ ಮಾರುಕಟ್ಟೆಗಾಗಿ ಉತ್ಪಾದನೆ ಮಾಡಲು ಇಟಾಲಿಯನ್ ಉದ್ಯಮಗಳು ತೋರಿಸುತ್ತಿರುವ ಆಸಕ್ತಿ ಮತ್ತು ಇಟಲಿಯಲ್ಲಿ ಭಾರತೀಯ ಕೈಗಾರಿಕೆಗಳ ಪ್ರಸ್ತುತತೆ ಹೆಚ್ಚುತ್ತಿದ್ದು, ಇದು ಅತ್ಯಂತ ಸಕಾರಾತ್ಮಕ ಸಂಕೇತವಾಗಿದೆ. ಪ್ರಸ್ತುತ ಎರಡೂ ಕಡೆಯಿಂದ ಇಂತಹ ಉದ್ಯಮಗಳ ಒಟ್ಟು ಸಂಖ್ಯೆ 1000 ದಾಟಿದ್ದು, ಇದು ನಮ್ಮ ಪೂರೈಕೆ ಸರಪಳಿಗಳ ಜೋಡಣೆಯನ್ನು ಮತ್ತಷ್ಟು ಬಲಪಡಿಸಲಿದೆ.

ತಾಂತ್ರಿಕ ನಾವೀನ್ಯತೆಯು ನಮ್ಮ ಪಾಲುದಾರಿಕೆಯ ಪ್ರಮುಖ ಅಂತಃಸತ್ವವಾಗಿದೆ. ಮುಂಬರುವ ದಶಕಗಳು ಕೃತಕ ಬುದ್ಧಿಮತ್ತೆ (ಎಐ), ಕ್ವಾಂಟಮ್ ಕಂಪ್ಯೂಟಿಂಗ್, ಸುಧಾರಿತ ಉತ್ಪಾದನೆ, ನಿರ್ಣಾಯಕ ಖನಿಜಗಳು ಮತ್ತು ಡಿಜಿಟಲ್ ಮೂಲಸೌಕರ್ಯಗಳಂತಹ ವಲಯಗಳಲ್ಲಿನ ಅಭೂತಪೂರ್ವ ಪ್ರಗತಿಯಿಂದ ಗುರುತಿಸಲ್ಪಟ್ಟ, ಅಳೆಯಲಾಗದ ವ್ಯಾಪ್ತಿಯ ತಾಂತ್ರಿಕ ಕ್ರಾಂತಿಗೆ ಸಾಕ್ಷಿಯಾಗಲಿವೆ.

ಭಾರತದ ಕ್ರಿಯಾತ್ಮಕ ನಾವೀನ್ಯ ಪರಿಸರ ವ್ಯವಸ್ಥೆ ಮತ್ತು ಉನ್ನತ ನೈಪುಣ್ಯತೆಯ ವೃತ್ತಿಪರ ಪ್ರತಿಭಾವಂತರ ಸಮೂಹವು, ಇಟಲಿಯ ಸುಧಾರಿತ ಕೈಗಾರಿಕಾ ಸಾಮರ್ಥ್ಯಗಳೊಂದಿಗೆ ಸಮ್ಮಿಲನ ಗೊಂಡು ಮೇಲ್ಕಂಡ ವಲಯಗಳಲ್ಲಿನ ನಮ್ಮ ಸಹಕಾರವನ್ನು ಸ್ವಾಭಾವಿಕ ಹಾಗೂ ಕಾರ್ಯತಂತ್ರ ಬದ್ಧವಾಗಿಸಿದೆ.

ಉಭಯ ರಾಷ್ಟ್ರಗಳ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಕೇಂದ್ರಗಳ ನಡುವೆ ವರ್ಧಿಸುತ್ತಿರುವ ಪಾಲುದಾರಿಕೆಯು ಈ ಪ್ರಯತ್ನಕ್ಕೆ ಪೂರಕ ಬಲವನ್ನು ನೀಡಲಿದೆ. ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವು ಈಗಾಗಲೇ ಜಗತ್ತಿನ ಹಲವಾರು ರಾಷ್ಟ್ರಗಳಲ್ಲಿ, ವಿಶೇಷವಾಗಿ ಗ್ಲೋಬಲ್ ಸೌತ್ (ಅಭಿವೃದ್ಧಿಶೀಲ ದೇಶಗಳು) ನಲ್ಲಿ ವ್ಯಾಪಕವಾಗಿ ಪ್ರತಿಧ್ವನಿಸುತ್ತಿದೆ.

ಕೃತಕ ಬುದ್ಧಿಮತ್ತೆಯು ಪ್ರಮುಖವಾಗಿ ನಮ್ಮ ಸಮಾಜ ಮತ್ತು ಜಾಗತಿಕ ಆರ್ಥಿಕತೆಯ ಮೇಲೆ ಆಳವಾದ ಪರಿಣಾಮ ಬೀರುತ್ತಿದೆ. ಎಐ ತಂತ್ರಜ್ಞಾನದ ಅಭಿವೃದ್ಧಿಯು ಜವಾಬ್ದಾರಿಯುತ ಹಾಗೂ ಮಾನವ -ಕೇಂದ್ರಿತವಾಗಿರಬೇಕು (ಮನುಷ್ಯನ ಒಳಿತಿಗಾಗಿ ಇರಬೇಕು) ಎಂಬುದನ್ನು ಖಚಿತಪಡಿಸಿ ಕೊಳ್ಳಲು ಭಾರತ ಮತ್ತು ಇಟಲಿ ದೀರ್ಘಕಾಲದಿಂದ ಜಂಟಿಯಾಗಿ ಶ್ರಮಿಸುತ್ತಿವೆ.

ಈ ದೃಷ್ಟಿಕೋನದಿಂದ, ಎಐ ಎಲ್ಲರನ್ನೂ ಒಳಗೊಳ್ಳುವ ಸಮಗ್ರ, ಅಭಿವೃದ್ಧಿಯ ಪ್ರಬಲ ಸಾಧನವಾಗಿ ಉಭಯ ರಾಷ್ಟ್ರಗಳು ಎದುರು ನೋಡುತ್ತವೆ; ಪ್ರಮುಖವಾಗಿ ಗ್ಲೋಬಲ್ ಸೌತ್ ವಲಯದಲ್ಲಿ, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಮತ್ತು ಸುಲಭವಾಗಿ ಲಭ್ಯವಾಗುವ ಬಹುಭಾಷಾ ತಂತ್ರಜ್ಞಾನಗಳು ಜನರ ನಡುವಿನ ಸಾಮಾಜಿಕ ಕಂದಕಗಳನ್ನು ಆಳಗೊಳಿಸುವ ಬದಲು ಅವುಗಳನ್ನು ಕಡಿಮೆ ಮಾಡಬಲ್ಲವು.

ತಂತ್ರಜ್ಞಾನದ ಕೇಂದ್ರಬಿಂದುವಾಗಿ ಮಾನವನನ್ನು ಇರಿಸಬೇಕು ಎಂಬ ಭಾರತದ ಮಾನವ್ ದೃಷ್ಟಿಕೋನ ಮತ್ತು ತನ್ನ ಮಾನವತಾವಾದಿ ಸಂಪ್ರದಾಯದಲ್ಲಿ ಬೇರೂರಿರುವ ಮಾನವ-ಕೇಂದ್ರಿತ ನೈತಿಕ ತಂತ್ರಜ್ಞಾನದ ನಿಯಮಾವಳಿಗಳನ್ನು (ಅಲ್ಗಾರ್-ಎಥಿಕಕ್ಸ) ಉತ್ತೇಜಿಸುವ ಇಟಲಿಯ ನಾಯಕತ್ವವನ್ನು ಆಧರಿಸಿ, ನಮ್ಮ ಪಾಲುದಾರಿಕೆಯು ಎಐ ತಂತ್ರಜ್ಞಾನವನ್ನು ಸಾಮಾಜಿಕ ಸಬಲೀಕರಣದ ವೇಗವರ್ಧಕವನ್ನಾಗಿ ರೂಪಿಸಲು ಬದ್ಧವಾಗಿದೆ.

ನಮ್ಮ ಈ ಕಾರ್ಯವಿಧಾನವು ಭಾರತದ ಡಿಜಿಟಲ್ ವ್ಯಾಪ್ತಿಯನ್ನು ಇಟಲಿಯ ನೈತಿಕ ಹಾಗೂ ಕೈಗಾರಿಕಾ ಪರಿಣತಿಯೊಂದಿಗೆ ಸಂಯೋಜಿಸುವ ಮೂಲಕ, ತಂತ್ರಜ್ಞಾನವು ಮಾನವ ಘನತೆಗೆ ಪೂರಕವಾಗಿ ಸೇವೆ ಸಲ್ಲಿಸುವುದನ್ನು ಖಚಿತಪಡಿಸುತ್ತದೆ.



ಸುರಕ್ಷಿತ ಡಿಜಿಟಲ್ ಸಹಕಾರ, ಸಾಮರ್ಥ್ಯ ವೃದ್ಧಿ ಹಾಗೂ ಬಲಿಷ್ಠ ಸೈಬರ್ ಮೂಲಸೌಕರ್ಯ ವಲಯಗಳಲ್ಲಿ ಅತ್ಯುತ್ತಮ ಕಾರ್ಯವಿಧಾನಗಳನ್ನು ಹಂಚಿಕೊಳ್ಳುವ ಮೂಲಕ, ಪ್ರತಿಯೊಂದು ರಾಷ್ಟ್ರವೂ ಎಐ ಅನ್ನು ರೂಪಿಸುವ ಮತ್ತು ಅದರ ಲಾಭವನ್ನು ಪಡೆಯುವಂತಹ ಮುಕ್ತ, ವಿಶ್ವಾಸಾರ್ಹ ಹಾಗೂ ಸಮಾನ ಡಿಜಿಟಲ್ ಜಗತ್ತನ್ನು ಸೃಷ್ಟಿಸುವ ಧ್ಯೇಯವನ್ನು ನಾವು ಹೊಂದಿದ್ದೇವೆ.

ಈ ದೃಷ್ಟಿಕೋನವೇ ಇಟಲಿಯ ಜಿ-7 ಅಧ್ಯಕ್ಷತೆಯ ತಿರುಳಾಗಿದೆ ಮತ್ತು ನವದೆಹಲಿಯಲ್ಲಿ ಯಶಸ್ವಿಯಾಗಿ ಜರುಗಿದ ಎಐ ಇಂಪ್ಯಾಕ್ಟ್ ಶೃಂಗಸಭೆ 2026 ರ ಪ್ರಮುಖ ಫಲಿತಾಂಶವೂ ಆಗಿದೆ. ಎಐ ಅನ್ನು ಮಾನವಕುಲಕ್ಕಾಗಿ ಮಾನವನೇ ರೂಪಿಸಿದ ಸಾಧನ ಎಂದು ಕಲ್ಪಿಸಿಕೊಳ್ಳುವುದು ಎಂದರೆ-ತಂತ್ರಜ್ಞಾನವು ಎಂದಿಗೂ ವ್ಯಕ್ತಿಗಳ ಸ್ಥಾನವನ್ನು ತುಂಬಲು ಸಾಧ್ಯವಿಲ್ಲ, ಜನರ ಮೂಲಭೂತ ಹಕ್ಕುಗಳನ್ನು ದುರ್ಬಲಗೊಳಿಸಲು ಸಾಧ್ಯವಿಲ್ಲ ಮತ್ತು ಸಾರ್ವಜನಿಕ ಚರ್ಚೆಗಳನ್ನು ಹಾದಿ ತಪ್ಪಿಸಲು ಅಥವಾ ಪ್ರಜಾಪ್ರಭುತ್ವದ ಪ್ರಕ್ರಿಯೆಗಳನ್ನು ಬದಲಾಯಿಸಲು ಇದನ್ನು ಬಳಸಲಾಗದು ಎಂದು ದೃಢವಾಗಿ ಪ್ರತಿಪಾದಿಸುವುದಾಗಿದೆ.

ಹೆಚ್ಚು ಅಂತರ್ ಸಂಪರ್ಕಿತವಾಗುತ್ತಿರುವ ಇಂದಿನ ಜಗತ್ತಿನಲ್ಲಿ ಸ್ವಾತಂತ್ರ್ಯ ಮತ್ತು ಮಾನವ ಘನತೆಯನ್ನು ರಕ್ಷಿಸುವ ನಮ್ಮ ಬದ್ಧತೆಯು ಈ ಮೂಲಭೂತ ಸವಾಲಿನ ಮೇಲೆಯೇ ಆಧಾರಿತವಾಗಿದೆ.

ನಮ್ಮ ಸಹಕಾರವು ಬಾಹ್ಯಾಕಾಶ ಕ್ಷೇತ್ರಕ್ಕೂ ವಿಸ್ತರಿಸಿದೆ. ಬಾಹ್ಯಾಕಾಶ ಪರಿಶೋಧನೆ ಮತ್ತು ಉಪಗ್ರಹ ತಂತ್ರಜ್ಞಾನದಲ್ಲಿ ಭಾರತದ ಪ್ರಗತಿ, ಇಟಲಿಯ ಏರೋಸ್ಪೇಸ್ ಎಂಜಿನಿಯರಿಂಗ್ ಉತ್ಕೃಷ್ಟತೆಯ ಜತೆಗೆ ಸೇರಿ ಜಂಟಿ ಯೋಜನೆಗಳು ಮತ್ತು ಮುಂದಿನ ಪೀಳಿಗೆಯ ತಂತ್ರಜ್ಞಾನ ಅಭಿವೃದ್ಧಿಗೆ ದೊಡ್ಡ ಅವಕಾಶಗಳನ್ನು ಒದಗಿಸುತ್ತವೆ.

ರಾಷ್ಟ್ರಗಳ ಸಮೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಭದ್ರತೆ ಮತ್ತು ಸ್ಥಿರತೆ ಅತ್ಯಗತ್ಯ. ರಕ್ಷಣೆ, ಭದ್ರತೆ ಮತ್ತು ಕಾರ್ಯತಂತ್ರದ ತಂತ್ರಜ್ಞಾನಗಳಂತಹ ವಲಯಗಳಲ್ಲಿ ತಮ್ಮ ಸಹಕಾರವನ್ನು ಮತ್ತಷ್ಟು ಬಲಪಡಿಸಲು ಇಟಲಿ ಮತ್ತು ಭಾರತ ಉದ್ದೇಶಿಸಿವೆ. ನಮ್ಮ ಸಹಯೋಗವು ಪ್ರಮುಖ ಸಮುದ್ರ ವ್ಯಾಪಾರ ಮಾರ್ಗಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತದೆ. ಹಾಗೆಯೇ ಭಯೋತ್ಪಾದನೆ, ಅಂತಾರಾಷ್ಟ್ರೀಯ ಅಪರಾಧ ಜಾಲಗಳು, ಮಾದಕವಸ್ತು ಕಳ್ಳಸಾಗಣೆ, ಸೈಬರ್ ಅಪರಾಧಗಳು ಮತ್ತು ಮಾನವ ಕಳ್ಳಸಾಗಣೆಯಂತಹ ಬೆದರಿಕೆಗಳ ವಿರುದ್ಧ ಹೋರಾಡುವ ಶಕ್ತಿಯನ್ನು ಬಲಪಡಿಸುತ್ತದೆ.

ಇಂಧನ ವಲಯವು ನಮ್ಮ ಪಾಲುದಾರಿಕೆಯ ಮತ್ತೊಂದು ಪ್ರಮುಖ ಆಧಾರಸ್ತಂಭವಾಗಿದೆ. ವೈವಿಧ್ಯಮಯ ಇಂಧನ ಮೂಲಗಳತ್ತ ಜಾಗತಿಕ ಸ್ಥಿತ್ಯಂತರವು ನಾವೀನ್ಯತೆ, ಹೂಡಿಕೆ ಮತ್ತು ವ್ಯಾಪಕ ಸಹಕಾರವನ್ನು ಅಪೇಕ್ಷಿಸುತ್ತದೆ. ಭಾರತ ಮತ್ತು ಇಟಲಿ ರಾಷ್ಟ್ರಗಳು ನವೀಕರಿಸಬಹುದಾದ ಇಂಧನದಿಂದ ಹಿಡಿದು ಹೈಡ್ರೋಜನ್ ತಂತ್ರಜ್ಞಾನಗಳವರೆಗೆ ಹಾಗೂ ಸ್ಮಾರ್ಟ್ ಗ್ರಿಡ್‌ಗಳಿಂದ ಹಿಡಿದು ಸ್ಥಿತಿಸ್ಥಾಪಕ ಮೂಲಸೌಕರ್ಯಗಳವರೆಗೆ ವಿವಿಧ ಕ್ಷೇತ್ರಗಳಲ್ಲಿ ಪರಸ್ಪರ ಸಹಕರಿಸುತ್ತಿವೆ.

ಗ್ರೀನ್ ಹೈಡ್ರೋಜನ್ ರಫ್ತಿನ ಜಾಗತಿಕ ಕೇಂದ್ರವಾಗಲು ಭಾರತವು ನೀಡುತ್ತಿರುವ ಉತ್ತೇಜನವು ಅಪಾರ ಸಾಮರ್ಥ್ಯವನ್ನು ಹೊಂದಿದ್ದು, ಇದು ನವೀಕರಿಸಬಹುದಾದ ಮೂಲಸೌಕರ್ಯ ವಲಯದಲ್ಲಿ ಇಟಲಿ ಹೊಂದಿರುವ ಸುಧಾರಿತ ತಂತ್ರಜ್ಞಾನಕ್ಕೆ ಮತ್ತು ಯುರೋಪಿಗೆ ಇಂಧನ ಪ್ರವೇಶ ದ್ವಾರವಾಗಿ ಆ ದೇಶ ಹೊಂದಿರುವ ಕಾರ್ಯತಂತ್ರದ ಪಾತ್ರಕ್ಕೆ ಸಂಪೂರ್ಣವಾಗಿ ಪೂರಕವಾಗಿದೆ. ಈ ಹಿನ್ನೆಲೆಯಲ್ಲಿ, ಭಾರತ ನೇತೃತ್ವದ ಪ್ರಮುಖ ಅಂತಾರಾಷ್ಟ್ರೀಯ ಉಪಕ್ರಮಗಳಾದ-ಅಂತಾರಾಷ್ಟ್ರೀಯ ಸೌರ ಒಕ್ಕೂಟ (ಐಎಸ್‌ಎ), ವಿಪತ್ತು ನಿರೋಧಕ ಮೂಲಸೌಕರ್ಯ ಒಕ್ಕೂಟ (ಸಿಡಿಆರ್‌ಐ) ಮತ್ತು ಜಾಗತಿಕ ಜೈವಿಕ ಇಂಧನ ಒಕ್ಕೂಟ (ಜಿಬಿಎ)-ಗಳಲ್ಲಿ ಇತರ ರಾಷ್ಟ್ರಗಳ ಜತೆಗೂಡಿ ನಾವು ನಡೆಸುತ್ತಿರುವ ಸಹಯೋಗವು ಅತ್ಯಂತ ಮಹತ್ವದ್ದಾಗಿದೆ.

ಭೌತಿಕ, ಡಿಜಿಟಲ್ ಹಾಗೂ ಮಾನವ ಸಂಪರ್ಕದ ಬೆಸುಗೆಯೇ ನಮ್ಮನ್ನು ಒಟ್ಟುಗೂಡಿಸುವ ಸೂತ್ರವಾಗಿದೆ. ಭಾರತ ಮತ್ತು ಇಟಲಿ ಉಭಯ ರಾಷ್ಟ್ರಗಳೂ ಜಾಗತಿಕ ಆರ್ಥಿಕತೆಯ ಎರಡು ನಿರ್ಣಾಯಕ ಕೇಂದ್ರಗಳಾದ ಇಂಡೋ-ಪೆಸಿಫಿಕ್ ಮತ್ತು ಮೆಡಿಟರೇನಿಯನ್ ಪ್ರದೇಶಗಳ ಹೃದಯಭಾಗದಲ್ಲಿ ನೆಲೆಗೊಂಡಿವೆ. ಇವುಗಳನ್ನು ಪರಸ್ಪರ ಪ್ರತ್ಯೇಕ ವಲಯಗಳಾಗಿ ನೋಡಲು ಸಾಧ್ಯವಿಲ್ಲ, ಬದಲಿಗೆ ಇವು ದಿನೇದಿನೇ ಹೆಚ್ಚುತ್ತಿರುವ ಅಂತರ್ ಸಂಪರ್ಕಿತ ಪ್ರದೇಶಗಳಾಗಿವೆ.

ವಾಸ್ತವವಾಗಿ, ಹಿಂದೂ ಮಹಾಸಾಗರವನ್ನು ಯುರೋಪ್ ಖಂಡಕ್ಕೆ ಜೋಡಿಸುವುದರ ಮೂಲಕ ವ್ಯಾಪಾರ, ತಂತ್ರಜ್ಞಾನ, ಇಂಧನ, ದತ್ತಾಂಶ ಮತ್ತು ವೈಚಾರಿಕ ವಿನಿಮಯದ ಪ್ರಮುಖ ಕಾರಿಡಾರ್ ಆಗಿ ಹೊರಹೊಮ್ಮುತ್ತಿರುವ ಇಂಡೋ-ಮೆಡಿಟರೇನಿಯನ್ ಎಂಬ ಹೊಸ ಪರಿಕಲ್ಪನೆಯ ಉಗಮಕ್ಕೆ ನಾವು ಸಾಕ್ಷಿಯಾಗುತ್ತಿದ್ದೇವೆ.

ನಿಖರವಾಗಿ ಈ ಅಂತರ್ ಸಂಪರ್ಕಿತ ಆಯಾಮದೊಳಗೆ ನಮ್ಮ ದ್ವಿಪಕ್ಷೀಯ ಬಾಂಧವ್ಯವು ಸ್ವಾಭಾವಿಕವಾಗಿ ಒಂದು ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯಾಗಿ ವಿಕಸನಗೊಳ್ಳುತ್ತಿದೆ; ಇದು ಎರಡು ಖಂಡಗಳನ್ನು ಬೆಸೆಯುವುದರ ಜತೆಗೆ ಹೊಸ ಜಾಗತಿಕ ಚಲನಶೀಲತೆಯನ್ನು ರೂಪಿಸಲಿದೆ.

ಈ ಹಿನ್ನೆಲೆಯಲ್ಲಿ, ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್ (ಐಎಂಇಸಿ) ಯೋಜನೆಯು ಆಧುನಿಕ ಸಾರಿಗೆ, ಮೂಲಸೌಕರ್ಯ, ಡಿಜಿಟಲ್ ಜಾಲ, ಇಂಧನ ವ್ಯವಸ್ಥೆಗಳು ಮತ್ತು ಬಲಿಷ್ಠ ಪೂರೈಕೆ ಸರಪಳಿಗಳ ಮೂಲಕ ನಮ್ಮ ಪ್ರದೇಶಗಳನ್ನು ಸಂಪರ್ಕಿಸುವ ಒಂದು ದೊಡ್ಡ ದೃಷ್ಟಿಕೋನವನ್ನು ಪ್ರತಿನಿಧಿಸುತ್ತದೆ. ಈ ದೃಷ್ಟಿಕೋನವನ್ನು ನನಸಾಗಿಸಲು ಇತರ ಪಾಲುದಾರರೊಂದಿಗೆ ಒಟ್ಟಾಗಿ ಕೆಲಸ ಮಾಡಲು ಭಾರತ ಮತ್ತು ಇಟಲಿ ಬದ್ಧವಾಗಿವೆ.

ನಮ್ಮ ರಾಷ್ಟ್ರಗಳ ನಡುವಿನ ಆಳವಾದ ಪಾಲುದಾರಿಕೆ ಹಾಗೂ ಶಾಶ್ವತ ಸಾಂಸ್ಕೃತಿಕ ಬಾಂಧವ್ಯದ ಶಕ್ತಿಯನ್ನು ಆಧರಿಸಿ, ನಾವು ನಮ್ಮ ಸವಾಲುಗಳನ್ನು ಸಮರ್ಥವಾಗಿ ಎದುರಿಸಬಹುದಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ, ಧರ್ಮ ಎಂಬ ಪರಿಕಲ್ಪನೆಯು ನಮ್ಮ ಕರ್ತವ್ಯಗಳಿಗೆ ಮಾರ್ಗದರ್ಶನ ನೀಡಬೇಕಾದ ಜವಾಬ್ದಾರಿಯ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ; ಹಾಗೆಯೇ ವಸುಧೈವ ಕುಟುಂಬಕಂ ಎಂಬ ಉದಾತ್ತ ತತ್ವವು ಈ ಅಂತರ್ ಸಂಪರ್ಕಿತ ಡಿಜಿಟಲ್ ಯುಗದಲ್ಲಿ ಅತ್ಯಂತ ಶಕ್ತಿಯುತವಾಗಿ ಪ್ರತಿಧ್ವನಿಸುತ್ತದೆ.

ಇಂತಹ ಉನ್ನತ ಮೌಲ್ಯಗಳು ನವೋದಯ ಕಾಲಘಟ್ಟದಲ್ಲಿ ಬೇರೂರಿರುವ ಇಟಲಿಯ ಮಾನವತಾವಾದಿ ಸಂಪ್ರದಾಯದಲ್ಲಿ ಸ್ವಾಭಾವಿಕವಾಗಿ ಪ್ರತಿಧ್ವನಿಸುತ್ತವೆ; ಇದು ಪ್ರತಿಯೊಬ್ಬ ವ್ಯಕ್ತಿಯ ಘನತೆ ಹಾಗೂ ಜನರನ್ನು ಮತ್ತು ಸಮಾಜಗಳನ್ನು ಒಂದುಗೂಡಿಸುವ ಸಂಸ್ಕೃತಿಯ ಅನನ್ಯ ಶಕ್ತಿಯನ್ನು ಎತ್ತಿಹಿಡಿಯುತ್ತದೆ. ಆದುದರಿಂದ, ನಮ್ಮ ಈ ಹಂಚಿಕೆಯ ದೃಷ್ಟಿಕೋನವು ನಮ್ಮ ಜನಸಾಮಾನ್ಯರನ್ನು ಕೇಂದ್ರಬಿಂದುವಾಗಿರಿಸಿಕೊಂಡು, ಸದೃಢ ಹಾಗೂ ಭವಿಷ್ಯದತ್ತ ಮುಖ ಮಾಡಿದ ಒಂದು ನೂತನ ಭಾರತ-ಇಟಲಿ ಪಾಲುದಾರಿಕೆಗೆ ಭದ್ರವಾದ ಅಡಿಪಾಯವನ್ನು ಹಾಕುವ ಧ್ಯೇಯವನ್ನು ಹೊಂದಿದೆ.

## ಇಟಾಲಿಯನ್ ತಿಂಡಿ ಗ್ನೋಚಿ

ಇದನ್ನು ಬಟಾಟೆಯ ಹಿಟ್ಟಿನಿಂದ ತಯಾರಿಸುತ್ತಾರೆ. ಬಟಾಟೆಯನ್ನು ಮೊದಲಿಗೆ ಚೆನ್ನಾಗಿ ಬೇಯಿಸಿ ನಂತರ ಕತ್ತರಿಸಿಕೊಂಡು ಪಾನ್‌ನಲ್ಲಿ ಹುರಿಯ ಬೇಕು. ಅದಕ್ಕೆ ಮೊಟ್ಟೆ, ಮೈದಾ, ಉಪ್ಪು ಮತ್ತು ನೀರು ಬೆರೆಸಿಕೊಂಡು ಸರಿಯಾಗಿ ಮ್ಯಾಶ್ ಮಾಡಿ, ಕಂದು ಬಣ್ಣ ಬರುವ ತನಕ ಹುರಿದರೆ ನಿಮ್ಮ ಗ್ನೋಚಿ ತಯಾರು. ರುಚಿಯನ್ನು ಹೆಚ್ಚಿಸುವ ಅಗತ್ಯವಿದ್ದಲ್ಲಿ ಇದಕ್ಕೆ ವಿವಿಧ ಬಗೆಯ ಸಾಸ್‌ಗಳನ್ನು ಹಾಕಿ ತಿನ್ನಬಹುದು. ಬಟಾಟೆಯಿಂದ ಕೇವಲ ಫ್ರೆಂಚ್ ಫ್ರೈ ಅಷ್ಟೇ ಅಲ್ಲ, ರುಚಿಕರವಾದ ಇಟಾಲಿಯನ್ ಗ್ನೋಚಿಯನ್ನೂ ತಯಾರಿಸಬಹುದು ಎನ್ನುವುದು ಇಟಲಿಯನ್ನರ ಅಭಿಮತ.

ಒಂದು ದಶಕದ ಹಿಂದೆ ಗೋಬಿ ಮಂಚೂರಿ ಎನ್ನುವ ಖಾದ್ಯ ಬಹು ಜನಪ್ರಿಯವಾಗಿತ್ತು. ಸ್ಟಾರ್ ಹೋಟೇಲ್ ಗಳಿಂದ ಬೀದಿ ಬದಿಯ ಫಾಸ್ಟ್ ಫುಡ್, ಢಾಬಾದವರೆಗೆ ಗೋಬಿ ಮಂಚೂರಿಯ ಘಮ ಪಸರಿಸಿತ್ತು. ಚೈನೀಸ್ ಫಾಸ್ಟ್ ಫುಡ್ ಎನ್ನುವ ಗಾಡಿಗಳು ಬೀದಿ ಬೀದಿಯಲ್ಲೂ ಕಾಣಸಿಗಲು ಪ್ರಾರಂಭವಾಗಿದ್ದವು. ಆಗೆಲ್ಲಾ ಚೈನೀಸ್ ಫುಡ್ ಎನ್ನುವ ಕ್ರೇಜ್. ಚೈನಾ ದೇಶದಲ್ಲಿ ತಯಾರಾಗದ ಖಾದ್ಯಗಳೂ ಚೈನೀಸ್ ಫುಡ್ ಎನ್ನುವ ಹೆಸರಿನಲ್ಲಿ ಮಾರಾಟವಾಗುತ್ತಿದ್ದವು. ಕ್ರಮೇಣ ಈ ಹುಚ್ಚು ಕಡಿಮೆಯಾಯಿತು. ಈಗ ಗೋಬಿ ಮಂಚೂರಿ ತಿನ್ನುವವರು ಬಹಳಷ್ಟು ಕಡಿಮೆಯಾಗಿದ್ದಾರೆ. ಆದರೆ ಅದರ ಬದಲು ಇಟಾಲಿಯನ್, ಕೊರಿಯನ್, ಮಂಗೋಲಿಯನ್, ಸ್ವಿಸ್, ಥಾಯಿ ಆಹಾರಗಳು ಜನಪ್ರಿಯಗೊಳ್ಳುತ್ತಿವೆ. ಇಟಲಿಯ ಜನಪ್ರಿಯ ಆಹಾರಗಳಲ್ಲಿ ಗ್ನೋಚಿಯೂ ಒಂದು. ಇಟಾಲಿಯನ್ ಫುಡ್ ವಿಭಾಗದಲ್ಲಿ ನೂರಾರು ವಿಧದ ಆಹಾರ ವೈವಿದ್ಯಗಳಿವೆ. ನಾವು ತಿನ್ನುವ ಹಲವಾರು ತಿನಸುಗಳು ಇಟಾಲಿಯನ್ ಮೂಲದ್ದೇ ಆಗಿವೆ. ಇಟಾಲಿಯನ್ ಬಾಣಸಿಗರಿಗಾಗಿ ಸ್ಟಾರ್ ಹೋಟೇಲ್‌ಗಳು ಪ್ರತ್ಯೇಕ ಅಡುಗೆ ಮನೆಯನ್ನೇ ನಿರ್ಮಿಸಿಕೊಟ್ಟಿವೆ. ಕೆಲವು ಇಟಾಲಿಯನ್ ಆಹಾರಗಳು ಭಾರತೀಯರ ನಾಲಿಗೆಯನ್ನು ಚಪ್ಪರಿಸುವಷ್ಟು ಬೇಡಿಕೆ ಕುದುರಿಸಿವೆ. ಇಟಲಿಗರ ಆಹಾರದಲ್ಲಿ ಪ್ರಸಿದ್ಧವಾದದ್ದು ಬಟಾಟೆ (ಆಲೂಗೆಡ್ಡೆ) ಯಿಂದ ತಯಾರಿಸಲಾಗುವ ಗ್ನೋಚಿ ಎಂಬ ಆಹಾರ.

ಬಟಾಟೆ ಜೊತೆ ಮೈದಾ, ಮೊಟ್ಟೆ, ನೀರು, ಉಪ್ಪು ಸೇರಿಸಿ ಸುಲಭವಾಗಿ ಗ್ನೋಚಿಯನ್ನು ತಯಾರಿಸಬಹುದು. ಇದರಲ್ಲೂ ಕ್ಲಾಸಿಕ್ ಇಟಾಲಿಯನ್ ಗ್ನೋಚಿ ಎನ್ನುವ ಖಾದ್ಯವು ಬಾಯಿ ಚಪ್ಪರಿಸುವಂತೆ ಮಾಡುತ್ತದೆ. ಇದನ್ನು ಬಟಾಟೆಯ ಹಿಟ್ಟಿನಿಂದ ತಯಾರಿಸುತ್ತಾರೆ. ಬಟಾಟೆಯನ್ನು ಮೊದಲಿಗೆ ಚೆನ್ನಾಗಿ ಬೇಯಿಸಿ ನಂತರ ಕತ್ತರಿಸಿಕೊಂಡು ಪಾನ್‌ನಲ್ಲಿ ಹುರಿಯ ಬೇಕು. ಅದಕ್ಕೆ ಮೊಟ್ಟೆ, ಮೈದಾ, ಉಪ್ಪು ಮತ್ತು ನೀರು ಬೆರೆಸಿಕೊಂಡು ಸರಿಯಾಗಿ ಮ್ಯಾಶ್ ಮಾಡಿ, ಕಂದು ಬಣ್ಣ ಬರುವ ತನಕ ಹುರಿದರೆ ನಿಮ್ಮ ಗ್ನೋಚಿ ತಯಾರು. ರುಚಿಯನ್ನು ಹೆಚ್ಚಿಸುವ ಅಗತ್ಯವಿದ್ದಲ್ಲಿ ಇದಕ್ಕೆ ವಿವಿಧ ಬಗೆಯ ಸಾಸ್‌ಗಳನ್ನು ಹಾಕಿ ತಿನ್ನಬಹುದು. ಬಟಾಟೆಯಿಂದ ಕೇವಲ ಫ್ರೆಂಚ್ ಫ್ರೈ ಅಷ್ಟೇ ಅಲ್ಲ, ರುಚಿಕರವಾದ ಇಟಾಲಿಯನ್ ಗ್ನೋಚಿಯನ್ನೂ ತಯಾರಿಸಬಹುದು ಎನ್ನುವುದು ಇಟಲಿಯನ್ನರ ಅಭಿಮತ. ಹಾಗಾದರೆ ಇನ್ನೇಕೆ ತಡ ಈಗಲೇ ಗ್ನೋಚಿ ತಯಾರಿಸಿ ಬಾಯಿಯನ್ನು ಚಪ್ಪರಿಸಿಕೊಂಡು ತಿನ್ನಿ!



## ಬಯಲು ಸೀಮೆಯ ಒಣ ಬೇಸಾಯ ಮತ್ತು ಸುಸ್ಥಿರ ಕೃಷಿ



ಬಯಲು ಸೀಮೆಯ ಮೇ ತಿಂಗಳು ಅತಿ ಹೆಚ್ಚು ಒಣ ವಾತಾವರಣ ಇರುವ ಕಾಲ. ಬೋರ್‌ವೆಲ್‌ಗಳು ಒಣಗುತ್ತಿದ್ದು, ರೈತರು ತಮ್ಮ ಅಡಿಕೆ ತೋಟಗಳನ್ನು ಉಳಿಸಿಕೊಳ್ಳಲು ಹತಾಶೆಯಿಂದ ಟ್ಯಾಂಕರ್‌ಗಳ ಮೂಲಕ ನೀರು ಬಿಡಿಸುತ್ತಿದ್ದಾರೆ. ಆದರೆ, ನಮ್ಮ ಕೃಷಿ ವಿಧಾನ ಭಿನ್ನವಾದದ್ದು. ನಾವು ಸ್ಥಳೀಯ ಹಾಗೂ ಕಡಿಮೆ ನೀರು ಬಯಸುವ ಮರ-ಗಿಡಗಳನ್ನು ಬೆಳೆಸಲು ಮತ್ತು ವೃದ್ಧಿ ಮಾಡಲು ಪ್ರಯತ್ನಿಸುತ್ತಿದ್ದೇವೆ.

ನಮ್ಮ ತೋಟದಲ್ಲಿ ಅಗ್ನಿಮಂಥ, ಅಶ್ವಗಂಧ, ಶಲ್ಲಕೀ, ನುಗ್ಗೆ, ಬೆಟ್ಟದನೆಲ್ಲಿ, ಮಾವು, ಸೀಮೆ ಹುಣಸೆ ಮುಂತಾದ ಗಿಡ-ಮರಗಳನ್ನು ನೆಟ್ಟಿದ್ದೇವೆ. ಬೇಲಿಯೊಳಗೆ ಬಾರೆ ಹಣ್ಣಿನ ಮರಗಳನ್ನು ನೋಡಿ ಗ್ರಾಮಸ್ಥರು, ಇದು ಬಯಲಿನ ಕಡೆ ಹೋದರೆ ಬೇಕಾದಷ್ಟು ಸಿಗುತ್ತದೆ, ಮುಳ್ಳಿನ ಗಿಡ! ಇಲ್ಲಿ ಯಾಕೆ ಹಾಕಿಕೊಂಡಿರಿ? ಎಂದು ಕೇಳಿದ್ದಿದೆ. ಜನಪದದಲ್ಲಿ ಮೊಲದ ಕೋಡು ಎಂದೇ ಗುರುತಿಸಲಾಗುವ ಕರಲುಮಾ ಫಿಂಬ್ರಿಯಾಟ ಅಥವಾ ಕರಲುಮಾ ಎಂಬಲಾಟ ಗಿಡಗಳು ಹಾಗೂ ಅಲೋವೆರಾವನ್ನು ನೋಡಿಯೂ ಜನ ಹೀಗೆಯೇ ಕೇಳುತ್ತಾರೆ. ಇವೆಲ್ಲದರ ಜೊತೆಗೆ, ನಮ್ಮ ದೇಶದ್ದಲ್ಲದಿದ್ದರೂ ಒಣ ಹವೆಯಲ್ಲಿ ಚೆನ್ನಾಗಿ ಬಾಳಬಲ್ಲ ಕೆಲವು ಅರೋಮ್ಯಾಟಿಕ್ ಸಸ್ಯಗಳನ್ನು ಹಾಗೂ ನಮ್ಮ ದೇಶದ್ದೇ ಆದ ಲಾವಂಚವನ್ನು ಸಹಸ್ರಾರು ಸಂಖ್ಯೆಯಲ್ಲಿ ನೆಟ್ಟಿದ್ದೇವೆ.

ಕಾಡಾಗುತ್ತಿರುವ ಕೃಷಿ ಭೂಮಿ



ಇಂತಹ ಅತಿ ಒಣ ವಾತಾವರಣದಲ್ಲೂ ಕೃಷಿ ಭೂಮಿಯಲ್ಲಿರುವ ನನ್ನ ರೂಮಿನ ಸುತ್ತ ಸಾಕಷ್ಟು ಹಸಿರು ತುಂಬಿ ಕಾಡಿನಂತಾಗಿದೆ. ಅಡವಿಗೆ ನೀರೆರೆದವರು ಯಾರು? ಎಂಬಂತೆ, ಕೃಷಿ ಭೂಮಿ ಕಾಡಿನಂತಾಗುತ್ತಿದ್ದ ಹಾಗೆ ಅದಕ್ಕೆ ಕೊಡಬೇಕಾದ ನೀರಿನ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ. ನಮ್ಮಲ್ಲಿ ಈಗ ನಾವು ಕೊಡುವ ನೀರಿನ ಪ್ರಮಾಣವನ್ನು ಸಾಕಷ್ಟು ಕಡಿಮೆ ಮಾಡಿದ್ದೇವೆ. ಗಿಡಗಳು ಮರಗಳಾದ ಮೇಲೆ ನೀರು ಕೊಡುವ ಅವಶ್ಯಕತೆಯೇ ಇರುವುದಿಲ್ಲ. ಬೇಸಿಗೆಯಲ್ಲಿ ಇವು ಸ್ವಲ್ಪ ಒಣಗಿದಂತೆ ಕಂಡರೂ, ಮಳೆ ಬಂದ ನಂತರ ಮತ್ತೆ ಎಲೆಗಳು ಚಿಗುರಿ ಹಸಿರಾಗುತ್ತವೆ. ಇದರಲ್ಲಿ ಎಷ್ಟೋ ಗಿಡಗಳು ಈಗಾಗಲೇ ವಸಂತ ಮಾಸಕ್ಕೆ ಅರಳಿ ಚಿಗುರಿವೆ. ಕೆಳಗೆ, ಮಣ್ಣಿನ ಮೇಲೆ ಎಲೆಗಳ ಹಾಸು ಇದ್ದರಂತೂ ಗಿಡಗಳು ಹಸಿರಾಗಿ ಉಳಿಯುತ್ತವೆ.

ನನ್ನ ಜಮೀನನ್ನು ಕೊಂಡಾಗ, ಮುಂಚಿನ ಮಾಲೀಕರು ಈಗಾಗಲೇ ಸಾಕಷ್ಟು ಗಿಡಗಳನ್ನು ಹಾಕಿದ್ದರು. ಅವುಗಳನ್ನು ನಾವು ತೆಗೆಯದೆ, ಉಳಿಸಿಕೊಳ್ಳಲು ಡ್ರಿಪ್ ನೀರಾವರಿ ವ್ಯವಸ್ಥೆ ಮಾಡಿಕೊಂಡೆವು. ನಾವು ಮಣ್ಣಿನ ಮೇಲೆ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದು, ನಮ್ಮ ಜಾಗವನ್ನು ಹಲವು ಝೋನ್‌ಗಳಾಗಿ ವಿಂಗಡಿಸಿದ್ದೇವೆ. ಅದರಲ್ಲಿ ಕೆಲವನ್ನು ಇಲ್ಲಿ ಸಚಿತ್ರ ಹಾಕಿರುವೆ (ಡ್ರೋನ್ ಬಳಸಿ ತೆಗೆದ ಚಿತ್ರಗಳು).


ಒಣ ವಲಯ : ಇದು ಲೆಮನ್ ಗ್ರಾಸ್ ಮತ್ತು ಒಣ ಪ್ರದೇಶದಲ್ಲಿ ಬೆಳೆಯುವ ಗಿಡಗಳ ವಲಯ. ಬೇಸಿಗೆಯಲ್ಲಿ ಇದು ಸಂಪೂರ್ಣವಾಗಿ ಒಣಗಿ ಹೋಗುತ್ತದೆ. ಆದರೆ ಇಲ್ಲಿ ನಮಗೆ ಕಳೆ ತೆಗೆಯುವ ಸಮಸ್ಯೆ ಇಲ್ಲ. ಏಕೆಂದರೆ ಕಳೆಯ ಜಾಗದಲ್ಲಿ ನಮಗೆ ಬೇಕಿರುವ ಅಶ್ವಗಂಧದಂತಹ ಗಿಡಗಳು ತಾನಾಗಿಯೇ ಬರುತ್ತಿವೆ. ಪ್ರಾಯಶಃ ಹಕ್ಕಿಗಳು ತಿಂದು ಹಾಕುವ ಪಿಕ್ಕೆಗಳಿಂದಾಗಿ ಇಡೀ ತೋಟದಲ್ಲಿ ಅಶ್ವಗಂಧದ ಸಸಿಗಳು ತಾನಾಗಿಯೇ ತಲೆ ಎತ್ತುತ್ತಿವೆ. ಹಕ್ಕಿಗಳಿಗಾಗಿ ನಾವು ಎಲ್ಲೆಡೆ ಮಡಿಕೆಯ ತಟ್ಟೆಗಳಲ್ಲಿ



ನೀರು ಇಟ್ಟಿರುವೆವು. ಆಗಾಗ ಮುಂಗಸಿಗಳು ಕೂಡ ಬಂದು ಅದರಲ್ಲಿ ನೀರು ಕುಡಿದು ಹೋಗುತ್ತವೆ.

ಔಷಧೀಯ ಸಸ್ಯಗಳು: ಇನ್ನು ಕೆಲವು ತೋಟಗಳಲ್ಲಿ ಕಳೆ ಎಂದು ಪರಿಗಣಿಸಲಾಗುವ ಅಟ್ಟಿಗೆ ಸೊಪ್ಪು ಅಥವಾ ಜಯಂತಿ ಗಿಡವನ್ನು (ಇದನ್ನು ತೀಕೆ ಗಿಡ ಅಥವಾ ಗಬ್ಬು ಸಣ್ಣ ಶಾವಂತಿ ಎಂದೂ ಕರೆಯುತ್ತಾರೆ) ನಾನು ತೆಗೆಯದಂತೆ ನೋಡಿಕೊಂಡಿದ್ದೇನೆ. ಗಾಯವಾದಾಗ ಇದರ ಎಲೆಗಳನ್ನು ಜಜ್ಜಿ ಹಚ್ಚಿದರೆ ಗಾಯ ಬೇಗ ಮಾಯುವುದಲ್ಲದೆ, ಗಾಯದ ಕಲೆ ಕೂಡ ಉಳಿಯುವುದಿಲ್ಲ. ಹಾಗಾಗಿ ಇದನ್ನು ಕಳೆ ಎಂದು ಪರಿಗಣಿಸದೆ ಹಾಗೇ ಬಿಟ್ಟಿದ್ದೇವೆ.

ಅತಿ ಒಣ ಪ್ರದೇಶ: ಅತ್ಯಂತ ಒಣಕಲಾಗಿರುವ ಜಾಗವು ಅರೋಮ್ಯಾಟಿಕ್ ಗಿಡಗಳು, ಬೋರೆಹಣ್ಣು ಹಾಗೂ ಕಮರ ಮರಗಳಿಗೆ ಮನೆಯಾಗಿದೆ. ಕಮರದ ಗಿಡಗಳನ್ನು ಚೌಕಾಕಾರವಾಗಿ ನೆಟ್ಟಿದ್ದೇನೆ. ಅವು ದೊಡ್ಡದಾಗಿ ಬೆಳೆದ ಮೇಲೆ ಆ ಮರಗಳಿಗೆ ಕಟ್ಟಿಗೆ ಕಟ್ಟಿ ಒಂದು ರೂಮಿನಂತೆ ಮಾಡಿ, ಮಕ್ಕಳು ಹತ್ತಿ ಕುಳಿತುಕೊಳ್ಳುವಂತೆ ವ್ಯವಸ್ಥೆ ಮಾಡಬಹುದು.



ಜಲ ಮರುಪೂರಣ ಮತ್ತು ತರಕಾರಿ ತೋಟ

ಮಳೆ ನೀರು ಸಂಪೂರ್ಣವಾಗಿ ನಮ್ಮ ಜಮೀನಿನಲ್ಲಿ ಇಂಗಿ ಹೋಗಲು ಅಲ್ಲಲ್ಲಿ ಪುಟ್ಟ ಗುಂಡಿಗಳನ್ನು ಮಾಡಿಸಿ, ಸುತ್ತಲೂ ಲಾವಂಚ ಹಾಕಿದ್ದೇವೆ. ಮಳೆನೀರು ಹರಿದರೆ ಈ ಗುಂಡಿಗಳಿಗೆ ಹೋಗುತ್ತದೆ. ಈ ಗುಂಡಿಗಳ ಬಳಿ ಹಾಕಿರುವ ಬಿದಿರು ಚೆನ್ನಾಗಿ ಬೆಳೆದಿದೆ.

ನಮ್ಮ ತರಕಾರಿ ತೋಟದ ಪಟ್ಟಿಗಳ ನಡುವೆ ಅಳಲೆ ಮರ, ರಾಸನ, ಅಮಟೆ ಮರ ಮತ್ತು ಹಲವು ಔಷಧಿ ಗಿಡಗಳಿವೆ. ಡ್ರೋನ್ ಮೂಲಕ ಎತ್ತರದಿಂದ ತೆಗೆದ ಚಿತ್ರಗಳಾದ್ದರಿಂದ ಕೆಲವೊಂದು ಗಿಡಗಳನ್ನು ಗುರುತು ಹಿಡಿಯುವುದು ಕಷ್ಟವಾಗಬಹುದು. ಆದರೂ ಇದು ಬೇಸಿಗೆಯಲ್ಲೂ ಸಾಕಷ್ಟು ಹಸಿರಾಗಿಯೇ ಇದೆ. ಇಲ್ಲಿ ನಾವು ಬದನೆ ಮುಂತಾದ ತರಕಾರಿಗಳನ್ನು ಬೆಳೆಯುತ್ತೇವೆ. ತರಕಾರಿಗಳನ್ನು ಬೆಳೆಯಲು ಸ್ವಲ್ಪ ನೆರಳಿನ ಅವಶ್ಯಕತೆ ಇದ್ದಾಗ, ಚಪ್ಪರ ಹಾಕಿ ಬಳ್ಳಿಗಳನ್ನು ಹಬ್ಬಿಸುವ ಪ್ರಯತ್ನ ಮಾಡಿರುವೆವು.

ಗೊಬ್ಬರ ಮತ್ತು ರೈಸ್ಡ್ ಬೆಡ್ ವ್ಯವಸ್ಥೆ: ಮೇಲಿನ ಬಲ ಭಾಗದಲ್ಲಿ ಕಾಣುವಂತೆ ತೋಟದ ಹಲವು ಜಾಗಗಳಲ್ಲಿ ಎಲೆಯ ಗೊಬ್ಬರದ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಪ್ರತಿಯೊಂದು ಗಿಡದಿಂದ ಕಿತ್ತ ಹಸಿ ಎಲೆಗಳನ್ನು ಮತ್ತು ಒಣಗಿದ ಎಲೆಗಳನ್ನು ಇಲ್ಲಿ ತಂದು ಬೆರೆಸುತ್ತೇವೆ. ಇದೇ ಚಿತ್ರದಲ್ಲಿ ಮತ್ತೊಂದು ಭಾಗದಲ್ಲಿ ಇಟ್ಟಿಗೆಗಳನ್ನು ಜೋಡಿಸಿ ಮಾಡಿದ ಸೊಪ್ಪಿನ ರೈಸ್ಡ್ ಬೆಡ್ ಇದೆ. ಇದರಲ್ಲಿ ಸೊಪ್ಪುಗಳನ್ನು ಬೆಳೆದುಕೊಳ್ಳುತ್ತೇವೆ. ನಡುನಡುವೆ ಸಾಕಷ್ಟು ತರಕಾರಿ ಸಸ್ಯಗಳು ಹಾಗೂ ದ್ರಾಕ್ಷಿ ಗಿಡಗಳನ್ನು ಹಾಕಿದ್ದೇವೆ.

ಸಂಪೂರ್ಣ ಜಮೀನಿನಲ್ಲಿ ಅಲ್ಲಲ್ಲಿ ಗೋಡಂಬಿ, ಪೇರಳೆ, ಸೀತಾಫಲ, ಮೋಸಂಬಿ, ಮಾವು ಮುಂತಾದ ಹಲವು ಹಣ್ಣಿನ ಗಿಡಗಳು ಸಮೃದ್ಧವಾಗಿ ಬೆಳೆಯುತ್ತಿವೆ.

**- ಹರಿ ಪ್ರಸಾದ್** ನಾಡಿಗ್





## ವಿದ್ಯಾರ್ಥಿಗಳ ಪ್ರವಾಸದಲ್ಲಿ ಸುರಕ್ಷೆ ಮೊದಲ ಆದ್ಯತೆಯಾಗಲಿ

ಇತ್ತೀಚೆಗೆ ವಿದ್ಯಾರ್ಥಿಗಳ ಪ್ರವಾಸದ ವಾಹನಗಳು ಸರಣಿ ಅಪಘಾತಗಳಿಗೆ ಈಡಾಗುತ್ತಿರುವ ಹಿನ್ನೆಲೆಯಲ್ಲಿ ಕಾಲೇಜು ಶಿಕ್ಷಣ ಇಲಾಖೆಯು ಜಲಪಾತ, ನದಿ ಹಾಗೂ ಸಮುದ್ರ ತೀರಗಳಿಗೆ ಮಕ್ಕಳ ಪ್ರವಾಸವನ್ನು ನಿಷೇಧಿಸಿರುವುದು ಅತ್ಯಂತ ಸ್ವಾಗತಾರ್ಹ ಮತ್ತು ಮುಂಜಾಗ್ರತೆಯ ಕ್ರಮವಾಗಿದೆ.

ಕಲಿಕೆ ಮತ್ತು ಜ್ಞಾನಾರ್ಜನೆಯ ಪವಿತ್ರ ಉದ್ದೇಶದಿಂದ ಕೈಗೊಳ್ಳುವ ಪ್ರವಾಸಗಳು, ಕೇವಲ ಕ್ಷಣಿಕ ಮೋಜು ಹಾಗೂ ಬೇಜವಾಬ್ದಾರಿತನದ ನಿರ್ಧಾರಗಳಿಂದಾಗಿ ದುರಂತದಲ್ಲಿ ಅಂತ್ಯವಾಗುತ್ತಿವೆ. ಪ್ರವಾಸಿ ತಾಣಗಳಲ್ಲಿ ನೀರಿನ ಆಳ ಅರಿಯದೆ ಇಳಿಯುವುದು, ಕಡಿದಾದ ಕಲ್ಲುಗಳ ಮೇಲೆ ನಿಂತು ಸೆಲ್ಫಿ ತೆಗೆದುಕೊಳ್ಳುವ ಸಾಹಸಕ್ಕೆ ಕೈ ಹಾಕುವುದು ಮತ್ತು ವಾಹನ ಚಾಲಕರ ಅತಿವೇಗ ಹಾಗೂ ನಿರ್ಲಕ್ಷ್ಯಗಳು ಇಂತಹ ಕಣ್ಣೀರಿನ ಕಥೆಗಳಿಗೆ ಕಾರಣವಾಗುತ್ತಿವೆ. ವಿದ್ಯಾರ್ಥಿ ಸಮೂಹದ ಅಮೂಲ್ಯ ಜೀವ ರಕ್ಷಣೆಗಾಗಿ ಕಾಲೇಜು ಇಲಾಖೆ ತಂದಿರುವ ಈ ಕಟ್ಟುನಿಟ್ಟಿನ ನಿಯಮಗಳನ್ನು ಶಾಲಾ ಮಟ್ಟಕ್ಕೂ ವಿಸ್ತರಿಸಬೇಕಾದ ತುರ್ತು ಅಗತ್ಯ ಇಂದು ಎದುರಾಗಿದೆ. ಈ ನಿಯಮಗಳು ಕೇವಲ ಕಾಗದದ ಮೇಲಿನ ಆದೇಶಗಳಾಗಿ ಉಳಿಯಬಾರದು. ಶಾಲಾ-ಕಾಲೇಜು ಆಡಳಿತ ಮಂಡಳಿಗಳು, ಶಿಕ್ಷಕರು, ಪೋಷಕರು ಮತ್ತು ಸ್ವತಃ ವಿದ್ಯಾರ್ಥಿಗಳು ಒಟ್ಟಾಗಿ ಈ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿದೆ. ಪ್ರವಾಸದ ಸ್ಥಳಗಳನ್ನು ಆಯ್ಕೆ ಮಾಡುವಾಗ ಐತಿಹಾಸಿಕ, ವೈಜ್ಞಾನಿಕ ಮತ್ತು ಸುರಕ್ಷಿತ ತಾಣಗಳಿಗೆ ಮೊದಲ ಆದ್ಯತೆ ನೀಡಬೇಕು. ಶಿಕ್ಷಕರು ಪ್ರವಾಸದುದ್ದಕ್ಕೂ ವಿದ್ಯಾರ್ಥಿಗಳ ಮೇಲೆ ನಿರಂತರ ನಿಗಾ ಇರಿಸಬೇಕು.

ಇದರ ಜತೆಗೆ ಪ್ರವಾಸಿ ತಾಣಗಳಲ್ಲಿ ನಮ್ಮ ಬೇಜವಾಬ್ದಾರಿತನ ನಾಗರಿಕ ಸಮಾಜ ತಲೆತಗ್ಗಿಸುವಂತಿದೆ. ಚಿತ್ರದುರ್ಗ ತಾಲೂಕಿನ ವಾಣಿವಿಲಾಸ ಅಣೆಕಟ್ಟಿನಲ್ಲಿ ತಂದೆಯೊಬ್ಬರು ಮಗುವನ್ನು ಕೈಯಲ್ಲಿ ಹಿಡಿದು ಸೆಲ್ಫಿ ತೆಗೆದುಕೊಳ್ಳುವಾಗ ಮಗು ನೀರಿಗೆ ಬಿದ್ದು ಮೃತಪಟ್ಟ ಘಟನೆ ಕೇವಲ ಹೃದಯ ವಿದ್ರಾವಕವಲ್ಲ, ಅದು ನಮಗೊಂದು ಎಚ್ಚರಿಕೆಯ ಘಂಟೆ. ಕ್ಷಣಿಕ ಲೈಕ್ಸ್ ಮತ್ತು ಕಮೆಂಟ್ಸ್ ಆಸೆಗಾಗಿ ಅತ್ಯಂತ ಅಪಾಯಕಾರಿ ಜಾಗಗಳಲ್ಲಿ ನಿಂತು ಜೀವವನ್ನೇ ಪಣಕ್ಕಿಡುವ ಸೆಲ್ಫಿ ಹುಚ್ಚು ಇಂದು ಮಹಾಮಾರಿಯಾಗಿ ಕಾಡುತ್ತಿದೆ. ಅಣೆಕಟ್ಟು ಕಡಿದ ಕಡಿದಾದ ಬೆಟ್ಟಗಳು, ಚಲಿಸುವ ರೈಲುಗಳ ಮುಂದೆ ನಿಂತು ಸೆಲ್ಫಿ ತೆಗೆದುಕೊಳ್ಳುವ ಹುಚ್ಚಿಗೆ ಈಗಾಗಲೇ ದೇಶಾದ್ಯಂತ ನೂರಾರು ಜೀವಗಳು ಸಾವನಪ್ಪಿವೆ. ಈ ಸಾವುಗಳು ಆಕಸ್ಮಿಕ ಅಪಘಾತಗಳಲ್ಲ ನಮ್ಮದೇ ಸ್ವಯಂಕೃತ ಅಪರಾಧಗಳು. ಈ ನಿರಂತರ ದುರಂತಗಳಿಗೆ ಕಡಿವಾಣ ಹಾಕಲು ಕೇವಲ ಸರಕಾರದ ನಿಯಮಗಳು ಸಾಲದು. ಅದಕ್ಕೆ ಸಾರ್ವಜನಿಕರ ಸಹಭಾಗಿತ್ವ ಮತ್ತು ಸ್ವಯಂ-ಶಿಸ್ತು ಅತೀ ಮುಖ್ಯ.

ಶೈಕ್ಷಣಿಕ ಪ್ರವಾಸಗಳು ಕೇವಲ ಮನೋರಂಜನೆಯ ಉದ್ದೇಶಕ್ಕೆ ಸೀಮಿತವಾಗದೆ ಐತಿಹಾಸಿಕ, ವೈಜ್ಞಾನಿಕ ಮತ್ತು ಶೈಕ್ಷಣಿಕ ಮಹತ್ವವುಳ್ಳ ಸುರಕ್ಷಿತ ಸ್ಥಳಗಳಿಗೆ ಮಾತ್ರ ಸೀಮಿತವಾಗಿರಬೇಕು. ಅಪಾಯಕಾರಿ ಸ್ಥಳಗಳಲ್ಲಿ ಮೊಬೈಲ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ಮಕ್ಕಳೊಂದಿಗೆ ಇರುವಾಗ ಪೋಷಕರು ಹೆಚ್ಚು ಜಾಗರೂಕರಾಗಿರಬೇಕು. ಪ್ರವಾಸಿ ತಾಣಗಳು ಮತ್ತು ಜಲಾಶಯಗಳ ಬಳಿ ನೋ ಸೆಲ್ಫಿ ಝೋನ್ ಎಂದು ಪ್ರಕಟಿಸಿ, ನಿಯಮ ಉಲ್ಲಂಘಿಸುವವರಿಗೆ ಭಾರೀ ದಂಡ ವಿಧಿಸುವ ಕಟ್ಟುನಿಟ್ಟಿನ ಕ್ರಮ ಜರಗಿಸಬೇಕು.

ಜ್ಞಾನ ಬೆಳೆಸಿಕೊಳ್ಳಬೇಕಾದ ಪ್ರವಾಸಗಳು ಸ್ಮಶಾನ ಯಾತ್ರೆಯಾಗಬಾರದು. ಹಾಗೆಯೇ, ಕ್ಯಾಮರಾದ ಒಂದು ಕ್ಲಿಕ್ ಇಡೀ ಜೀವನದ ಸಂತೋಷವನ್ನೇ ಕಸಿದುಕೊಳ್ಳುವಂತಾಗಬಾರದು. ಸರಕಾರ ತಂದಿರುವ ನಿಯಮಗಳನ್ನು ಶಿಸ್ತಿನಿಂದ ಪಾಲಿಸೋಣ. ಸೆಲ್ಫಿ ಹುಚ್ಚಿಗೆ ಕಡಿವಾಣ ಹಾಕಿ, ಜವಾಬ್ದಾರಿಯುತ ಪ್ರವಾಸ ಸಂಸ್ಕೃತಿಯನ್ನು ಬೆಳೆಸಿಕೊಳ್ಳೋಣ. ಪ್ರವಾಸದ ಆನಂದವು ಜವಾಬ್ದಾರಿಯ ಮಿತಿಯೊಳಗಿದ್ದಾಗ ಮಾತ್ರ ಶೈಕ್ಷಣಿಕ ಪ್ರವಾಸಗಳು ಸುಸೂತ್ರವಾಗಿ ಮತ್ತು ಅರ್ಥಪೂರ್ಣವಾಗಿ ಮುಕ್ತಾಯಗೊಳ್ಳಲು ಸಾಧ್ಯ.

**- ಕೆ.ಪಿ.ಅಶ್ವಿನ್** ರಾವ್

# ಒಂದೇ ಸಲ ಚುನಾವಣೆ ನಡೆದರೆ 7 ಲಕ್ಷ ಕೋ.ರೂ. ಉಳಿತಾಯ

## ಜಿ.ಡಿ.ಪಿ. ಶೇ. 1.6 ರಷ್ಟು ಹೆಚ್ಚಲಿದೆ: ಪಿ.ಪಿ. ಚೌಧರಿ

• ಪ್ರಜೋದಯ ವರದಿ

**ಗಾಂಧಿನಗರ:** ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭಾ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸಿದರೆ ಭಾರತವು 7 ಲಕ್ಷ ಕೋಟಿ ರೂ.ಗಳನ್ನು ಉಳಿಸಬಹುದು ಮತ್ತು ಆ ಹಣವನ್ನು ಅಭಿವೃದ್ಧಿ ಉದ್ದೇಶಗಳಿಗಾಗಿ ಬಳಸಬಹುದು ಎಂದು ಒಂದು ರಾಷ್ಟ್ರ, ಒಂದು ಚುನಾವಣೆ ಪ್ರಸ್ತಾವನೆಯನ್ನು ಪರಿಶೀಲಿಸುವ ಜಂಟಿ ಸಂಸದೀಯ ಸಮಿತಿಯ ಅಧ್ಯಕ್ಷ ಪಿ.ಪಿ. ಚೌಧರಿ ತಿಳಿಸಿದ್ದಾರೆ.

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ಪ್ರಸ್ತಾವನೆಯನ್ನು ಪರಿಶೀಲಿಸುತ್ತಿರುವ ಜೆಪಿಸಿ ಮೂರು ದಿನಗಳ ಭೇಟಿಗಾಗಿ ಗುಜರಾತ್‌ಗೆ ತೆರಳಿದೆ. ಪ್ರಸ್ತಾವನೆ ಕುರಿತು ಎಲ್ಲಾ ಇಲಾಖೆಗಳ ಇನ್‌ಪುಟ್‌ಗಳ ಕುರಿತು ಸಮಗ್ರ ವರದಿಯನ್ನು ಸಲ್ಲಿಸುವಂತೆ ಚೌಧರಿ ಗುಜರಾತ್ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿದರು.

ಸಮಿತಿಯು ಗಾಂಧಿನಗರದ ಗಿಫ್ಟ್ ನಗರದಲ್ಲಿ ಅಧಿಕಾರಿಗಳು, ಮುಖ್ಯ ಕಾರ್ಯದರ್ಶಿ ಎಂ.ಕೆ.ದಾಸ್, ಆಡಳಿತಾರೂಢ ಭಾರತೀಯ ಜನತಾ ಪಕ್ಷದ (ಬಿಜೆಪಿ) ಕಾರ್ಯಕಾರಿಗಳು ಮತ್ತು ವಿವಿಧ ಇಲಾಖೆಗಳ ಕಾರ್ಯದರ್ಶಿಗಳೊಂದಿಗೆ ಸಭೆ ನಡೆಸಿತು.

ಈ ಹಿಂದೆ ಪರಿಗಣಿಸದ ಹಲವಾರು ನಿರ್ಣಾಯಕ ವಿಷಯಗಳನ್ನು ಪ್ರಸ್ತಾಪಿಸಿದ ಅವರು, ನಾವು ಅವರಿಗೆ ಸಮಗ್ರ ವರದಿಯನ್ನು ಸಿದ್ಧಪಡಿಸಲು ಸೂಚಿಸಿದ್ದೇವೆ. ಇದನ್ನು ಭಾರತದಾದ್ಯಂತ ಇತರ ರಾಜ್ಯ ಸರ್ಕಾರಗಳು ಮಾದರಿಯಾಗಿ ಅನುಸರಿಸಬಹುದು, ಇದರಿಂದಾಗಿ ಅವರು ತಮ್ಮ ವರದಿಗಳನ್ನು ಆ ಸ್ವರೂಪದಲ್ಲಿ ಸಲ್ಲಿಸಬಹುದು ಎಂದು ಅವರು ಹೇಳಿದರು.



ಈ ವರದಿಯು ಕೈಗಾರಿಕೆಗಳು, ಉತ್ಪಾದನಾ ನಷ್ಟಗಳು, ಕಾರ್ಮಿಕ ವಲಸೆ, ಉದ್ಯೋಗ, ಜಿಎಸ್‌ಟಿ ಸಂಗ್ರಹ, ಆರ್ಥಿಕತೆ, ಪ್ರವಾಸೋದ್ಯಮ ಮತ್ತು ಶಿಕ್ಷಣದ ಮೇಲಿನ ಪರಿಣಾಮವನ್ನು ಸಮಗ್ರವಾಗಿ ನಿರ್ಣಯಿಸಬೇಕು ಎಂದು ಅವರು ಹೇಳಿದರು.

ಮುಖ್ಯ ಕಾರ್ಯದರ್ಶಿಯವರು ಹೆಚ್ಚಿನ ಪರಿಗಣನೆ ಮತ್ತು ಕ್ರಮಕ್ಕಾಗಿ ಸಮಗ್ರ ವರದಿಯನ್ನು ಸಲ್ಲಿಸಬೇಕು. ಇಂದಿನ ಚರ್ಚೆಗಳು ಅತ್ಯಂತ ಸಕಾರಾತ್ಮಕ ಮತ್ತು ರಚನಾತ್ಮಕವಾಗಿದ್ದವು ಎಂದು ಚೌಧರಿ ಹೇಳಿದರು.

ಚೌಧರಿ ನೇತೃತ್ವದ 41 ಸದಸ್ಯರ ಸಂಸದೀಯ ಸಮಿತಿಯು ಏಕಕಾಲಿಕ ಚುನಾವಣೆಗಳಿಗೆ ಸಂಬಂಧಿಸಿದ ಎರಡು ಪ್ರಸ್ತಾವಿತ ಶಾಸನಗಳನ್ನು ಪರಿಶೀಲಿಸುತ್ತಿದೆ ಸಂವಿಧಾನ (129ನೇ ತಿದ್ದುಪಡಿ) ಮಸೂದೆ ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳು (ತಿದ್ದುಪಡಿ) ಮಸೂದೆ. ಏಕಕಾಲಿಕ ಚುನಾವಣೆಗಳು ನಡೆದರೆ, ದೇಶವು 7 ಲಕ್ಷ ಕೋಟಿ ರೂ.ಗಳನ್ನು ಉಳಿಸುತ್ತದೆ, ಜಿಡಿಪಿಯನ್ನು ಶೇಕಡಾ 1.6 ರಷ್ಟು ಹೆಚ್ಚಿಸುತ್ತದೆ ಎಂದು ಚೌಧರಿ ಹೇಳಿಕೊಂಡರು.

ಇದು ಜಿಡಿಪಿಯನ್ನು ಶೇಕಡಾ 1.6 ರಷ್ಟು ಹೆಚ್ಚಿಸಬಹುದು ಎಂದು ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ. ಏಕಕಾಲದಲ್ಲಿ ಚುನಾವಣೆಗಳು ನಡೆದರೆ, ದೇಶವು 7 ಲಕ್ಷ ಕೋಟಿ ರೂಪಾಯಿಗಳನ್ನು ಉಳಿಸಬಹುದು. ಆ ಹಣವನ್ನು ಮೂಲ ಸೌಕರ್ಯ, ಬಡವರ ಕಲ್ಯಾಣ, ಶಿಕ್ಷಣ, ಆರೋಗ್ಯ ರಕ್ಷಣೆ ಮತ್ತು ಇತರ ಸಾರ್ವಜನಿಕ ಕಲ್ಯಾಣ ಕಾರ್ಯಗಳಿಗೆ ಬಳಸಬಹುದು ಎಂದು ಅವರು ತಿಳಿಸಿದರು.

ಚುನಾವಣಾ ಸುಧಾರಣೆಗಳು ರಾಷ್ಟ್ರಕ್ಕೆ ಪ್ರಯೋಜನವನ್ನು ನೀಡಬೇಕು ಎಂಬುದು ಪ್ರಧಾನಿ ಮೋದಿಯವರ ದೃಷ್ಟಿಕೋನವಾಗಿದೆ. ಅವರು ರಾಮ್‌ನಾಥ್ ಕೋವಿಂದ್ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿದ್ದರು. ತನ್ನ ವರದಿಯಲ್ಲಿ, ಆ ಸಮಿತಿಯು ಏಕಕಾಲದಲ್ಲಿ ಚುನಾವಣೆಗಳನ್ನು ಸಹ ಶಿಫಾರಸು ಮಾಡಿದೆ ಎಂದು ಚೌಧರಿ ಹೇಳಿದರು.

ಏಕಕಾಲದಲ್ಲಿ ಚುನಾವಣೆಗಳನ್ನು ಹೇಗೆ ನಿರ್ವಹಿಸುವುದು ಎಂಬುದರ ಕುರಿತು ಚರ್ಚಿಸಲಾಗುತ್ತಿದೆ ಎಂದು ಸಮಿತಿಯ ಅಧ್ಯಕ್ಷರು ಹೇಳಿದರು.

# ರಾಜ್ಯದಲ್ಲಿ ಒಂದು ವಾರ ವ್ಯಾಪಕ ಮಳೆ

## ಭಾರತೀಯ ಹವಾಮಾನ ಇಲಾಖೆಯಿಂದ ಮುನ್ಸೂಚನೆ

• ಪ್ರಜೋದಯ ವರದಿ

**ಬೆಂಗಳೂರು:** ನೈರುತ್ಯ ಮುಂಗಾರು ಮೇ 26ಕ್ಕೆ ಕೇರಳಕ್ಕೆ ಆಗಮಿಸುವ ಸಾಧ್ಯತೆಯಿದೆ. ಹೀಗಾಗಿ ಕರ್ನಾಟಕದಲ್ಲೂ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ.

ಮುಂಗಾರು ಆಗಮನಕ್ಕೂ ಮುನ್ನವೇ ರಾಜ್ಯದಲ್ಲಿ ಇಂದಿನಿಂದ ಮೇ 22ರವರೆಗೆ ಗುಡುಗು ಸಹಿತ ಭಾರೀ ಮಳೆಯಾಗಲಿದೆ. ಉತ್ತರ ಒಳನಾಡು ಮತ್ತು ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಗುಡುಗು, ಮಿಂಚು ಮತ್ತು ಬಿರುಗಾಳಿ ಗಾಳಿ (ಗಂಟೆಗೆ 50-60 ಕಿ.ಮೀ) ಸಹಿತ ಭಾರೀ ಮಳೆಯಾಗುವ ಸಾಧ್ಯತೆಗಳಿವೆ.

ಕೊಡಗು, ಹಾಸನ, ಚಿಕ್ಕಮಗಳೂರು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಮೇ 21 ರ ವೇಳೆಗೆ ಗುಡುಗು ಸಹಿತ ಭಾರೀ ಮಳೆ ಹಾಗೂ ಆಲಿಕಲ್ಲು ಮಳೆಯಾಗುವ



ಸಾಧ್ಯತೆ ಇದ್ದು, ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಇನ್ನು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಸಾಧಾರಣದಿಂದ ಭಾರೀ ಮಳೆಯಾಗುವ ನಿರೀಕ್ಷೆ ಇದ್ದು, ಯೆಲ್ಲೋ ಅಲರ್ಟ್ ನೀಡಲಾಗಿದೆ.

ಬೆಳಗಾವಿ, ಧಾರವಾಡ, ಹಾವೇರಿ, ಗದಗ ಜಿಲ್ಲೆಗಳಲ್ಲಿ ಗುಡುಗು ಮತ್ತು ಬಿರುಗಾಳಿ ಸಹಿತ ಸಾಧಾರಣ ಮಳೆಯಾಗುವ ಲಕ್ಷಣಗಳಿವೆ. ಬಾಗಲಕೋಟೆ, ವಿಜಯಪುರ, ಕಲಬುರಗಿ,



ರಾಯಚೂರು ಜಿಲ್ಲೆಗಳಲ್ಲಿ ತಾಪಮಾನವು ಗರಿಷ್ಠ 39 ರಿಂದ 42 ವರೆಗೆ ಇರಲಿದ್ದು, ಒಣಹವೆ ಮುಂದುವರಿಯಲಿದೆ. ಆದರೆ ಸಂಜೆ ವೇಳೆ ತಂಪಾದ ಗಾಳಿ ಅಥವಾ ಹಗುರ ಮುಂಗಾರು ಪೂರ್ವ ಮಳೆಯಾಗಬಹುದು.

**ಕರಾವಳಿಯಲ್ಲಿ ಗಾಳಿ ಸಮೇತ ಮಳೆ:** ಮೇ 22 ರಿಂದ 24ರವರೆಗೆ ಕರಾವಳಿ ಕರ್ನಾಟಕದ ಒಂದೆರಡು ಕಡೆಗಳಲ್ಲಿ ಗಂಟೆಗೆ 30-40 ಕಿಲೋಮೀಟರ್ ವೇಗದಲ್ಲಿ ಬೀಸುವ ಬಿರುಗಾಳಿ ಹಾಗೂ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ.

ಇದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಸೂಚನೆ ನೀಡಲಾಗಿದೆ.

# ಜಾನುವಾರು ಸಾಗಣೆ: ಚಾಲಕನಿಗೆ ಥಳಿತ

• ಪ್ರಜೋದಯ ವರದಿ

**ಹಾಸನ:** ವಾಹನದಲ್ಲಿ ಜಾನುವಾರುಗಳನ್ನು ಸಾಗಾಟ ಮಾಡುವಾಗ ಬಜರಂಗದಳದ ಕಾರ್ಯಕರ್ತರು ವಾಹನವನ್ನು ಅಡ್ಡಗಟ್ಟಿದ ವೇಳೆ ವಾಹನ ಚಾಲಕ ಹಾಗು ಬಜರಂಗದಳದ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆದು ಜಗಳ ವಿಕೋಪಕ್ಕೆ ತಿರುಗಿ ವಾಹನ ಚಾಲಕನಿಗೆ ಥಳಿಸಿದ ಘಟನೆ ತಾಲ್ಲೂಕಿನ, ತೇಜೂರು-ಶಂಖ ರಸ್ತೆಯಲ್ಲಿ ನಡೆದಿದೆ.

ಬಕ್ರಿದ್ ಹಬ್ಬ ಹಿನ್ನಲೆ ಮೂರು ಗೋವುಗಳನ್ನು ವಾಹನದಲ್ಲಿ ಸಾಗಿಸುತ್ತಿದ್ದ ಸಂದರ್ಭದಲ್ಲಿ ವಿಷಯ ತಿಳಿದ ಭಜರಂಗದಳದ ಕಾರ್ಯಕರ್ತರು ವಾಹನವನ್ನು ಅಡ್ಡಗಟ್ಟಿ ಚಾಲನನ್ನು ಪ್ರಶ್ನಿಸಿದ್ದಾರೆ. ಈ ವೇಳೆ ವಾಹನ ಚಾಲಕ ಅನ್ಸರ್ ಹಾಗು ಬಜರಂಗದಳದ ಕಾರ್ಯಕರ್ತರ ನಡುವೆ ವಾಗ್ವಾದ ಶುರುವಾಗಿದ್ದು



ಚಾಲಕ ಅನ್ಸರ್‌ಗೆ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ಥಳಿಸಿದ್ದಾರೆ.

ಸ್ಥಳಕ್ಕೆ ಪೊಲೀಸರು ಆಗಮಿಸಿ ಗಲಾಟೆ ನಿಯಂತ್ರಿಸಿದ್ದಾರೆ. ಪೊಲೀಸರು ಬರುತ್ತಿದ್ದಂತೆ ಚಾಲಕ ಅನ್ಸರ್ ಪರಾರಿಯಾಗಿದ್ದು, ಗೋವುಗಳನ್ನು ರಕ್ಷಣೆ ಮಾಡಿ ಗೋಶಾಲೆಗೆ ಪೊಲೀಸರು ಕಳುಹಿಸಿದ್ದಾರೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಗುಂಡಿ ಬಿದ್ದು ಶಿಥಿಲವಾಗಿದ್ದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

## ಇನ್ನಷ್ಟು ರಸ್ತೆಗಳ ಅಭಿವೃದ್ಧಿಗೆ ಎಲ್ಲ ಸಿದ್ಧತೆ: ಶಾಸಕ ಹೆಚ್.ಕೆ.ಸುರೇಶ್

• ಪ್ರಜೋದಯ ವರದಿ

**ಬೇಲೂರು:** ಬೇಲೂರು-ಮೂಡಿಗೆರೆ ರಸ್ತೆಯ ನಾಗೇನಹಳ್ಳಿ- ಹಂಜಿಹಳ್ಳಿ-ಹಿರೆಹಸಡೆ ಸಂಪರ್ಕ ರಸ್ತೆ ಸಂಪೂರ್ಣ ಗುಂಡಿ ಬಿದ್ದು ಶಿಥಿಲವಾಗಿದ್ದ ಹಿನ್ನೆಲೆಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗುತ್ತಿದೆ ಎಂದು ಶಾಸಕ ಹೆಚ್.ಕೆ.ಸುರೇಶ್ ಹೇಳಿದರು.

ತಾಲೂಕಿನ ನಾಗೇನಹಳ್ಳಿ ಸಮೀಪದಿಂದ ಹಂಜಿಹಳ್ಳಿ-ಹಿರೆಹಸಡೆ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಮಲೆನಾಡು ಬಾಗದಲ್ಲಿ ಹೆಚ್ಚು ಮಳೆಯಾಗುವ ಹಿನ್ನೆಲೆಯಲ್ಲಿ ಸಾಕಷ್ಟು ರಸ್ತೆಗಳು ಹಾಳಾಗಿರುವುದು ಸಾರ್ವಜನಿಕರು ಮತ್ತು ಜಾನುವಾರುಗಳು ಸಹ ಓಡಾಡಲು ಹರ ಸಾಹಸ ಪಡುವಂತಾಗಿರುವುದು ನಮ್ಮ ಸ್ಥಳೀಯ ಗ್ರಾಮಸ್ಥರು ಗಮನಕ್ಕೆ ತಂದು ಹಿನ್ನೆಲೆಯಲ್ಲಿ ಮತ್ತು ಈ ಭಾಗದಲ್ಲಿ



ಹೆಚ್ಚಾಗಿ ಕಾಡಾನೆಗಳು ಬೀಡು ಬಿಡುವುದು, ರಸ್ತೆ ಸೇರಿದಂತೆ ಎಲ್ಲೆಂದರಲ್ಲಿ ಹಗಲು ರಾತ್ರಿ ಎನ್ನದೆ ಓಡಾಡುವುದರಿಂದ ಸಾರ್ವಜನಿಕರು ಓಡಾಡುವುದಕ್ಕೆ ಅನುಕೂಲ ಕಲ್ಪಿಸಲು ಜಿಪಂ ವಿಭಾಗದಿಂದ ಹಂಜಿಹಳ್ಳಿ-ಹಿರೆಹಸಡೆ ರಸ್ತೆಯನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ.

ಜತೆಗೆ ಈಗಾಗಲೇ ಮಲೆನಾಡು ಬಾಗದಲ್ಲಿ ಸಾಕಷ್ಟು ರಸ್ತೆಗಳನ್ನು ಅಭಿವೃದ್ಧಿಗೊಳಿಸಿದ್ದು, ಇನ್ನಷ್ಟು ರಸ್ತೆಗಳ ಅಭಿವೃದ್ಧಿಗೆ ಎಲ್ಲ ಸಿದ್ಧತೆ ಕೈಗೊಳ್ಳಲಾಗಿದೆ. ಸರ್ಕಾರದಿಂದ ಅನುದಾನ ಬಂದ ತಕ್ಷಣವೇ ಅಭಿವೃದ್ಧಿ ಕೆಲಸಗಳನ್ನು ಮಾಡಿಸಲಾಗುವುದು. ಅಲ್ಲದೆ ಮಳೆಗಾಲ ಪ್ರಾರಂಭವಾಗುವುದರಿಂದ ಯಾವುದೇ ಅನಾಹುತಕ್ಕೂ ಅವಕಶವಾಗದಂತೆ ವಿವಿಧ ಇಲಾಖೆ ಅಧಿಕಾರಿಗಳು ಮುನ್ನೆಚ್ಚರಿಕೆ ವಹಿಸಬೇಕೆಂದು ತಿಳಿಸಲಾಗಿದೆ. ಮತ್ತು ಸಾರ್ವಜನಿಕರು ಸಹ ಜಾಗೃತಿ ವಹಿಸಿದರೆ ಯಾವುದೇ ಸಮಸ್ಯೆಯಾಗುವುದಿಲ್ಲ. ಮುಂದಿನ ದಿನಗಳಲ್ಲಿ ಈ ಬಾಗದ ರಸ್ತೆ ಸೇರಿದಂತೆ ಗ್ರಾಮಗಳ ಅಭಿವೃದ್ಧಿಗೆ ಬೇಕಾದ ಸೌಲಭ್ಯಗಳನ್ನು ಕೊಡಿಸಲು ಕ್ರಮ ಕೈಗೊಳ್ಳಲಾಗುವುದು. ಗ್ರಾಮಸ್ಥರು ಸಹಕಾರ ನಿಡಬೇಕು ಎಂದರು.

ಜಿಪಂ ಮಾಜಿ ಸದಸ್ಯ ಸಿ.ಎಸ್. ಪ್ರಕಾಶ್ ಮಾತನಾಡಿ, ತಾಲೂಕಿನ ಹಂಜಿಹಳ್ಳಿ- ಹಿರೆಹಸಡೆ ರಸ್ತೆ ಅಭಿವೃದ್ಧಿಗೆ ಸಾಸಕರು ಅನುಧಾನ ಕೊಡುವ ಮೂಲಕ ಗ್ರಾಮೀಣ ಬಾಗದ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ಕೊಡುತ್ತಿರುವುದು ಮತ್ತು ಈ ಗ್ರಾಮಕ್ಕೆ ತುಂಬಾನೆ ರಸ್ತೆಯ ಅವಶ್ಯಕತೆ ಇತ್ತು. ಇಂತಹ ಕುಗ್ರಾಮವನ್ನು ಹುಡುಕಿ ಕೆಲಸ ಮಾಡಿಸುತ್ತಿರುವುದಕ್ಕೆ ಅಭಿನಂದಿಸುತ್ತೇನೆ. ಇಷ್ಟೆ ಅಲ್ಲದೆ ಇನ್ನೂ ಹೆಚ್ಚು ರಸ್ತೆ ಮಾಡಿಸಲು ಶಾಸಕರು ಸಹಕಾರ ನಿಡಬೇಕು. ಅಲ್ಲದೆ ತಾಲೂಕಿನಾದ್ಯಂತ ರಸ್ತೆಗಳು ಸೇರಿದಂತೆ ಅಭಿವೃದ್ಧಿ ಕೆಲಸ ಮಾಡಿಸುತ್ತಿರುವುದಕ್ಕೆ ಪಕ್ಕದ ತಾಲೂಕು, ಜಿಲ್ಲೆಯ ಜನಪ್ರತಿನಿಧಿಗಳೆ ಹೇಳುತ್ತಿರುವುದು ಕೇಳಿದ್ದೇವೆ. ಆದರೆ ನಮ್ಮ ಶಾಸಕರು ಇನ್ನೂ ಹೆಚ್ಚಿನ ಕೆಲಸಗಳನ್ನು ಮಾಡಲಿ ಎಂದು ಆಶಯ ವ್ಯಕ್ತಪಡಿಸಿದರು.

ರಮೇಶ್ ಸುವರ್ಣ, ಸಂಪತ್, ಸಣ್ಣೇಗೌಡ, ವೀರಭದ್ರೇಗೌಡ, ಧರ್ಮೇಗೌಡ, ಸುಮನ್, ಮಹೇಶ್, ಮೂರ್ತಿ, ರಾಜು, ಗೋಪಾಲ್, ಮೊಗಪ್ಪಗೌಡ, ಸುಧಾ, ರಂಜಿತ್, ಗ್ರಾಪಂ ಅಭಿವೃದ್ಧಿ ಅಧಿಕಾರಿ ರೇವತಿ ಇತರರಿದ್ದರು.

# ಶಾಲಾ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆ

**ಹಾಸನ:** ವಿಶ್ವ ಪರಿಸರ ದಿನಾಚರಣೆ-2025ರ ಅಂಗವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಚೇರಿ ಹಾಸನ ವತಿಯಿಂದ ಶಾಲಾ ಮಕ್ಕಳಿಗಾಗಿ ಜೂ.2 ರಂದು ಬೆಳಿಗ್ಗೆ 10 ಗಂಟೆಗೆ ಮಹಾರಾಜ ಪಾರ್ಕ್, ಹಾಸನ ಇಲ್ಲಿ ಕಿರಿಯ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳಿಗಾಗಿ ಪರಿಸರ ಕುರಿತು Inspired by nature, for climate, for our future, ಪ್ರಕೃತಿಯಿಂದ ಪ್ರೇರಿತ ಹವಮಾನಕ್ಕಾಗಿ ನಮ್ಮ ಭವಿಷ್ಯಕ್ಕಾಗಿ ಎಂಬ ಘೋಷ ವಾಕ್ಯದ ಕುರಿತು ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ ಏರ್ಪಡಿಸಲಾಗಿದೆ. ವಿವರಗಳಿಗಾಗಿ ಪರಿಸರ ಅಧಿಕಾರಿ ಭಾಸ್ಕರ್, 9972993021 ಕಚೇರಿಯ ದೂ. ಸಂಖ್ಯೆ: 08172-241004ಗೆ ಸಂಪರ್ಕಿಸಿ.

# ಪುಷ್ಪಗಿರಿ ಮಠಕ್ಕೆ ಮರಳುತ್ತಾರೆಂಬ ಆತಂಕ ಬೇಡ

## ಶ್ರೀ ನಂದೀಶ್ವರ ಶಿವಾಚಾರ್ಯ ಸ್ವಾಮೀಜಿ

• ಪ್ರಜೋದಯ ವರದಿ

**ಬೇಲೂರು:** ಪುಷ್ಪಗಿರಿ ಹಾಗೂ ನಂದಿಗುಡಿ ವೃಷಭಪುರಿ ಮಠದ ಪೀಠತ್ಯಾಗ ಮಾಡಿದ ತಾವು ಯಾವುದೇ ಸಂಪತ್ತು ಅಥವಾ ವಸ್ತುಗಳನ್ನು ಕೊಂಡೊಯ್ದಿಲ್ಲ. ಮತ್ತೆ ಆ ಮಠಕ್ಕೆ ತಾವು ಮರಳುತ್ತೇವೆ ಎಂಬ ಆತಂಕ ಯಾರಿಗೂ ಬೇಡವೆಂದು ಹಾಸನ ತಾಲ್ಲೂಕು ಸೀಗೆಗುಡ್ಡದ ಶ್ರೀ ನಂದೀಶ್ವರ ಶಿವಾಚಾರ್ಯ ಸ್ವಾಮೀಜಿ ಅವರು ಸ್ಪಷ್ಟಪಡಿಸಿದರು.

ತಾಲ್ಲೂಕಿನ ಹೆಬ್ಬಾಳು ಗ್ರಾಮದ ಗೌರಿಶಂಕರ ಗೃಹದಲ್ಲಿ ನಡೆದ ಇಷ್ಟಲಿಂಗ ಪೂಜೆ ಹಾಗು ಶಿವಾನುಭವಗೋಷ್ಠಿ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಅವರು, ವಿದ್ಯಾರ್ಥಿ ದಿಶೆಯಲ್ಲಿಯೇ ಯಲಗುಂದ ಮಠದ ಸ್ವಾಮೀಜಿಯಾಗಿ ಸೇವೆ ಸಲ್ಲಿಸಿದ್ದೆವು. ಬಳಿಕ ದಾವಣಗೆರೆ



ಜಿಲ್ಲೆಯ ನಂದಿಗುಡಿ ಮಠದ ಪೀಠಾಧಿಪತಿಗಳಾಗಿ ಕಾರ್ಯ ನಿರ್ವಹಿಸಿದ್ದೇವೆ. ನಂತರ ಪೂಜ್ಯ ಶ್ರೀ ಬಸವರಾಜೇಂದ್ರ ಸ್ವಾಮೀಜಿಗಳು ಲಿಂಗೈಕ್ಯರಾಗಿದ್ದರಿಂದ ಭಕ್ತರ ಅಭಿಲಾಷೆಯಂತೆ ಪುಷ್ಪಗಿರಿ ಮಠದ ಜವಾಬ್ದಾರಿ ಹೊತ್ತಿದ್ದೆವು ಎಂದು ಸಮರ್ಥಿಸಿಕೊಂಡರು.

ಭಕ್ತರ ಸಹಕಾರದಿಂದ ನಂದಿಗುಡಿ ಮತ್ತು ಪುಷ್ಪಗಿರಿ ಮಠಗಳ ಅಭಿವೃದ್ಧಿಗೆ ಸಾಕಷ್ಟು ಸೇವಾ ಕಾರ್ಯಗಳನ್ನು ನಡೆಸಲಾಗಿದೆ. ಆದರೆ, ಪೀಠತ್ಯಾಗದ ನಂತರ ಅಲ್ಲಿನ ಯಾವುದೇ ವಸ್ತುಗಳು ನಮ್ಮೊಂದಿಗೆ ಬಂದಿಲ್ಲ. ಮಠದ ಆಸ್ತಿಪಾಸ್ತಿಗಳು ಭಕ್ತರಿಗೆ ಸೇರಿದ್ದು, ಅವುಗಳ ಮೇಲೆ ನಮಗೆ ಯಾವುದೇ ಹಕ್ಕಿಲ್ಲ. ಕಾಯಕ ಮತ್ತು ದಾಸೋಹ ತತ್ವಗಳ ಮೇಲೆ ಅಪಾರ ನಂಬಿಕೆ ಇಟ್ಟುಕೊಂಡು ಇಂದಿಗೂ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದೇವೆ ಎಂದು ಹೇಳಿದರು.

ತಾಲ್ಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಬ್ಬಾಳು ಹಾಲಪ್ಪ, ಪ್ರಧಾನ ಕಾರ್ಯದರ್ಶಿ ರಾಜಕುಮಾರ್, ಖಜಾಂಚಿ ಧನಂಜಯ್, ನಿವೃತ್ತ ಪಿಡಿಒ ರಾಜಶೇಖರ್, ನಿವೃತ್ತ ಶಿಕ್ಷಕರಾದ ಧನಂಜಯ್, ಬಿ.ಎಂ. ದೊಡ್ಡವೀರೇಗೌಡ, ರಮೇಶಪ್ಪ, ದೊಡ್ಡಬ್ಯಾಡಿಗೆರೆ ಮಲ್ಲೇಶ್, ಸೂರಿ, ಮೋಹನ್ ಉಪಸ್ಥಿತರಿದ್ದರು.

# ಕುಡಿಯುವ ನೀರು ಯೋಜನೆಗಳಿಗೆ ತಾಂತ್ರಿಕ ಅಡ್ಡಿ: ಶಾಸಕ ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಸಕಲೇಶಪುರ:** ವಿದ್ಯುತ್ ಇಲಾಖೆಯ ತಾಂತ್ರಿಕ ತೊಡಕುಗಳು ಕುಡಿಯುವ ನೀರಿನ ಯೋಜನೆಗಳ ಪ್ರಗತಿಗೆ ಅಡ್ಡಿಯಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗಳು ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳ ಟಾಸ್ಕ್‌ಫೋರ್ಸ್ ಸಭೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಗಳ ಸೂಚನೆಯಂತೆ ಈ ತಿಂಗಳ 26 ರ ಒಳಗಾಗಿ ಕುಡಿಯುವ ನೀರಿನ ಕಾಮಗಾರಿಗಳನ್ನು ಮುಕ್ತಾಯಗೊಳಿಸಬೇಕಿದೆ. ಆದರೆ, ನಮ್ಮ ತಾಲ್ಲೂಕಿನಲ್ಲಿ ಮೂರು ತಿಂಗಳ ಹಿಂದೆ ನಡೆದಿರುವ ಕಾಮಗಾರಿಗೆ ವಿದ್ಯುತ್ ಸಂಪರ್ಕ ಕಲ್ಪಿಸದ ಕಾರಣ ಕಾಮಗಾರಿಗಳು ಅಪೂರ್ಣವಾಗಿ ಉಳಿದಿವೆ.



ತಾಲ್ಲೂಕಿನಲ್ಲಿ 87 ಕುಡಿವ ನೀರಿನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು ಇದರಲ್ಲಿ 55 ಬೌತಿಕ ಕಾಮಗಾರಿ ಬಹುತೇಕ ಮುಕ್ತಾಯವಾಗಿದ್ದು ವಿದ್ಯುತ್ ಇಲಾಖೆಗೆ 76 ಲಕ್ಷ ಹಣ ಸಹ ಪಾವತಿಸಿ ಮೂರು ತಿಂಗಳಾದರೂ ವಿದ್ಯುತ್ ಇಲಾಖೆ ತಾಂತ್ರಿಕ ಕಾರಣಗಳನ್ನು ಮುಂದಿಟ್ಟು ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ವಿಳಂಬ ಮಾಡುತ್ತಿದೆ ಎಂದರು.

ತಾಂತ್ರಿಕ ಸಮಸ್ಯೆ ಬಗೆಹರಿಸುವಂತೆ ಹಿರಿಯ ಅಧಿಕಾರಿಗಳ ಮಟ್ಟದಲ್ಲಿ ಚರ್ಚೆ ನಡೆಸಿದರೂ ಪ್ರಯೋಜನವಾಗಿಲ್ಲ. ಬೇಸಿಗೆ ಹಿನ್ನಲೆಯಲ್ಲಿ ತಾಲ್ಲೂಕಿನ 10 ಗ್ರಾ.ಪಂ.ಗಳ ಸುಮಾರು 22 ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಎದುರಾಗುವ ಸಾಧ್ಯತೆ ಇದ್ದು, ಈ ಸಮಸ್ಯೆ ತಲೆ ಎತ್ತದಂತೆ ಮಾಡಲು ಕಾಮಗಾರಿ ಮುಕ್ತಾಯ ಗೊಂಡಿರುವ 55 ಕುಡಿಯುವ ನೀರಿನ ಯೋಜನೆ ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲೇ ಬೇಕಿದೆ. ಮತ್ತೊಮ್ಮೆ ಈ ವಿಚಾರದ ಬಗ್ಗೆ ಸಂಬಂಧಪಟ್ಟ ಇಲಾಖೆಯ ಸಚಿವರೊಂದಿಗೆ ಮಾತನಾಡಿ ಸಮಸ್ಯೆ ಬಗೆಹರಿಸಲಾಗುವುದು ಎಂದರಲ್ಲದೆ, ಇನ್ನುಳಿದ 32 ಕಾಮಗಾರಿ ಪಗ್ರತಿ ಹಂತದಲ್ಲಿದ್ದು ವಿದ್ಯುತ್ ಇಲಾಖೆಗೆ ಹಣ ಪಾವತಿಸಬೇಕಿದೆ ಎಂದರು.

ಸರ್ಕಾರಿ ಭೂಮಿಯಲ್ಲಿ ಮನೆ ಕಟ್ಟಿದವರಿಗೆ ಗ್ರಾ.ಪಂ. ಪರವಾನಗಿ ನೀಡದ ಕಾರಣ ಮನೆ ಕಟ್ಟಿದವರಿಗೆ ವಿದ್ಯುತ್ ಇಲಾಖೆ ವಿದ್ಯುತ್ ಸಂಪರ್ಕ ನೀಡಲು ನಿರಾಕರಿಸುತ್ತಿದೆ. ಪರಿಣಾಮ ತಾಲ್ಲೂಕಿನ ಸಾಕಷ್ಟು ಕುಟುಂಬಗಳು ಕತ್ತಲಲ್ಲಿ ವಾಸಿಸುವಂತಾಗಿದೆ. ಗ್ರಾ.ಪಂ. ಗಳ ಪರವನಾಗಿ ಇಲ್ಲದ ಕಾರಣ ಯಾವುದೆ ಸೌಲಭ್ಯಗಳಿನ್ನು ಒದಗಿಸದ ಹಿನ್ನಲೆಯಲ್ಲಿ ಸಾಕಷ್ಟು ಜನರು ಕಾಡುಮಾನವರಂತೆ ಬದುಕು ನಡೆಸಬೇಕಿದೆ. ಮುಂದಿನ ಅಧೀವೇಶನದಲ್ಲಿ ಈ ಬಗ್ಗೆ ಗಮನ ಸೆಳೆಯಲಾಗುವುದು ಎಂದರು.

ತಾ.ಪಂ. ಇ.ಒ. ಗಂಗಾಧರ್, ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರ ಉಪಸ್ಥಿತರಿದ್ದರು.

# ವಿಧುರ-ವಿಧವೆ ಸಮಾಲೋಚನೆ ಸಭೆ

• ಪ್ರಜೋದಯ ವರದಿ

**ಶಿವಮೊಗ್ಗ:** ಮರಳಿ ಯತ್ನವ ಮಾಡು, ಮರಳಿ ಯತ್ನವ ಮಾಡು ಎಂಬ ತತ್ವಪದದಂತೆ ಶಿವಮೊಗ್ಗಾದಲ್ಲಿ ನಗರದ ಶ್ರೀ ಕಲಾ ಕೌಶಲ್ಯಾಭಿವೃದ್ಧಿ ಕೇಂದ್ರದಲ್ಲಿ ಮೇ 31 ರಂದು ಭಾನುವಾರ ಸರ್ವ ಜಾತಿ- ಜನಾಂಗಗಳಿಗೆ ಸೇರಿದ ವಿಧುರ-ವಿಧವೆ ಸಮಾಲೋಚನಾ ಸಭೆ ಏರ್ಪಡಿಸಲಾಗಿದೆ.

ಇದೊಂದು ಮಾನವೀಯ ಸಂಬಂಧ ಹಾಗು ಸಾಮಾಜಿಕ ಕಳಕಳಿಯ ಹೊಸದಿಕ್ಕಿನ ಕಡೆಗಿನ ಪ್ರಯತ್ನವಾಗಿದ್ದು ನಾಡಿನ ನಾನಾ ಕಡೆಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ, ಅಂದು ಬೆಳಿಗ್ಗೆ 11=00 ಗಂಟೆಗೆ ವಿವಿಧೆಡೆಗಳಿಂದ ವಿಧುರ-ವಿಧವೆ ಹಾಗು ಪರಿತ್ಯಕ್ತರು ಭಾಗವಹಿಸಲಿದ್ದಾರೆ, ರೂಢಿಗತ ಸಂಕೋಲೆಗಳಿಂದ ಹೊರಬಂದು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸಮಾವೇಶದಲ್ಲಿ ಪಾಲ್ಗೊಳ್ಳುವಂತೆ ಕೋರಿದೆ.

ಆಸಕ್ತರು ಆರ್.ಟಿ. ನಟರಾಜ್, ಎಸ್.ವಿ.ರಾಜಮ್ಮ, ಶ್ರೀ ಕಲಾ ಕೌಶಲ್ಯಾಭಿವೃದ್ಧಿ ಕೇಂದ್ರ, ಒಂದನೆ ಮಹಡಿ, ಜಿಲ್ಲಾ ನಿವೃತ್ತ ನೌಕರರ ಸಂಘ, ಪ್ರೆಸ್ ಕ್ಲಬ್ ಎದುರು, ಆರ್.ಟಿ.ಒ. ಆಫೀಸ್ ರಸ್ತೆ, ಜಿಲ್ಲಾಧಿಕಾರಿಗಳ ಕಚೇರಿ ಆವರಣ, ಶಿವಮೊಗ್ಗ. ಮೊಬೈಲ್: 9448143165/9449552635/9342158359/6363002259 ಹಾಗು ಇವರಲ್ಲಿ ಹೆಸರು ನೊಂದಾಯಿಸಿ ಕೊಂಡು ಪೋಸ್ಟ್‌ಕಾರ್ಡ್ ಸೈಜ್ ಫೋಟೋ, ಆಧಾರ್ ಕಾರ್ಡ್, ಇತರೆ ಸಮಂಜಸ ದಾಖಲೆಗಳ ಸಹಿತ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು.

# ಮೇ 21-22 ರಂದು ವಿದ್ಯುತ್ ವ್ಯತ್ಯಯ

ಹಾಸನ: ಬೆಳಗುಂಬ 110/11ಕೆ.ವಿ ವಿ.ವಿ.ಕೇಂದ್ರದಿಂದ ಉದ್ದೇಶಿತ 110 ಕೆ.ವಿ. ಏಕ ಮಾರ್ಗವನ್ನು ದ್ವಿ-ಗೋಪುರದ ಮುಖಾಂತರ ಜೊತೆಗಿ ವಾಹಕವನ್ನು ಬಳಸಿ railway Traction 110/25 ಕೆ.ವಿ ವಿ.ವಿ.ಕೇಂದ್ರದವರೆಗೆ ಮಾರ್ಗ ನಿರ್ಮಾಣದ ಕಾಮಗಾರಿಗೆ ಸಂಬಂಧಿಸಿದಂತೆ ಸದರಿ 110/11 ಕೆ.ವಿ ಬೆಳಗುಂಬ ವಿದ್ಯುತ್ ಮಾರ್ಗದ ವಾಹಕ ಎಳೆಯುವ ಕಾಮಗಾರಿ ನಿರ್ವಹಿಸಲು ಮಾರ್ಗ ಮುಕ್ತತೆ ಅವಶ್ಯಕವಿರುವುದರಿಂದ 110/11 ಕೆ.ವಿ ಬೆಳಗುಂಬ ವಿದ್ಯುತ್ ಮಾರ್ಗದಿಂದ ಸರಬರಾಜಾಗುವ ವಿದ್ಯುತ್ ವಿತರಣಾ ಕೇಂದ್ರಗಳಾದ 110/11 ಕೆ.ವಿ ಗಂಡಸಿ, 110/11ಕೆ.ವಿ ಬೆಳಗುಂಬ, 110/11 ಕೆ.ವಿ ಕೊಂಡೇನಾಳುಯಲ್ಲಿ ಮೇ.22ರಂದು ವಿದ್ಯುತ್ ವ್ಯತ್ಯಯವಾಗಲಿದೆ.

# ಮೌಲ್ಯಾಧಾರಿತ ಶಿಕ್ಷಣದ ಮಹತ್ವ ಅರಿತು ಮುನ್ನಡೆಯಬೇಕು

• ಪ್ರಜೋದಯ ವರದಿ

**ಹಾಸನ:** ನಗರದ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ನಡೆದ ವಾರ್ಷಿಕೋತ್ಸವ ಕಾರ್ಯಕ್ರಮವು ಸಂಭ್ರಮ, ಸಾಧನೆ ಮತ್ತು ಸಾಂಸ್ಕೃತಿಕ ವೈಭವದ ಅಪೂರ್ವ ಸಂಯೋಜನೆಯಾಗಿ ಎಲ್ಲರ ಮನಸೆಳೆಯಿತು. ವಿದ್ಯಾರ್ಥಿಗಳ ಪ್ರತಿಭೆ, ಅಧ್ಯಾಪಕರ ಸಮರ್ಪಣೆ ಹಾಗೂ ಸಂಸ್ಥೆಯ ಶೈಕ್ಷಣಿಕ ಸಾಧನೆಗಳನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿದ ಈ ಕಾರ್ಯಕ್ರಮವು ಅತ್ಯಂತ ಅದ್ದೂರಿಯಾಗಿ ನಡೆಯಿತು.

ಭರತ್ ಪಿಯು ಅಕಾಡೆಮಿ ಸಂಸ್ಥಾಪಕ ಭರತ್ ಅವರು ಮಾತನಾಡಿ, ಸೆಂಟ್ ಜೋಸೆಫ್ ಕಾಲೇಜು ಉತ್ತಮ ಶಿಕ್ಷಣ ಮತ್ತು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸಂಸ್ಥೆಯು



ಶ್ರಮಿಸುತ್ತಿದ್ದು, ವಿದ್ಯಾರ್ಥಿಗಳು ಸರಿಯಾದ ಗುರಿಯತ್ತ ಸಾಗಬೇಕು ಎಂದು ತಿಳಿಸಿದರು.

ಸೇಂಟ್ ಜೋಸೆಫ್ ಸಂಸ್ಥೆಗಳ ಸುಪೀರಿಯರ್ ಫಾ. ಲಿಯೋ ಪೆರೇರಾ ಎಸ್.ಜೆ. ಅವರು ಮಾತನಾಡಿ, ತಮ್ಮ ಪ್ರೇರಣಾದಾಯಕ ಸಂದೇಶಗಳಲ್ಲಿ ಅವರು ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು, ಪರಿಶ್ರಮ ಮತ್ತು ಮೌಲ್ಯಾಧಾರಿತ ಶಿಕ್ಷಣದ ಮಹತ್ವವನ್ನು ಅರಿತು ಮುನ್ನಡೆಯಬೇಕೆಂದು ಕರೆ ನೀಡಿದರು.

ಪ್ರಾಂಶುಪಾಲ ಫಾ.ಡಾ.ಮ್ಯಾಕ್ಸಿಮ್ ಡಯಾಸ್ ಎಸ್.ಜೆ. ವಾರ್ಷಿಕ ವರದಿಯನ್ನು ವಾಚಿಸಿ, ಕಾಲೇಜು ಕಳೆದ ಸಾಲಿನಲ್ಲಿ ದಾಖಲಿಸಿದ ಶೈಕ್ಷಣಿಕ ಸಾಧನೆಗಳು, ಕ್ರೀಡೆ, ಸಾಮಾಜಿಕ ಸೇವೆ, ಸಾಮರ್ಥ್ಯ ವೃದ್ಧಿ ಕಾರ್ಯಕ್ರಮಗಳು, ಆಧ್ಯಾತ್ಮಿಕ ಬೆಳವಣಿಗೆ, ಇಂಟರ್ನ್‌ಶಿಪ್ ಮತ್ತು ಉದ್ಯೋಗೋದ್ಯಮ ಚಟುವಟಿಕೆಗಳ ಕುರಿತು ಸಮಗ್ರ ಮಾಹಿತಿ ನೀಡಿದರು. ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಕಾಲೇಜು ಕೈಗೊಂಡಿರುವ ವಿವಿಧ ಪ್ರಯತ್ನಗಳನ್ನು ಅವರು ವಿಶೇಷವಾಗಿ ಉಲ್ಲೇಖಿಸಿದರು.

ಕಾಲೇಜಿನ ಹಣಕಾಸು ಅಧಿಕಾರಿ ಹಾಗೂ ಗಣಿತಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದ ಫಾ. ರಾಯನ್ ಪೆರೇರಾ ಎಸ್.ಜೆ. ಅವರಿಗೆ ಆತ್ಮೀಯ ಬೀಳ್ಕೊಡುಗೆ ನೀಡಲಾಯಿತು. ಅವರ ಸೇವೆಯನ್ನು ಸ್ಮರಿಸಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಕೃತಜ್ಞತೆ ಸಲ್ಲಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರೇಕ್ಷಕರ ಮನ ಗೆದ್ದವು.

# ಆ. 31 ರೊಳಗೆ ಜಿಬಿಎ ಚುನಾವಣೆಗೆ ಸುಪ್ರೀಂ ಗಡುವು

**ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದೂ ಪಾಲಿಕೆಗಳಿಗೆ ಆಗಸ್ಟ್ 31ರ ಒಳಗೆ ಚುನಾವಣೆ ನಡೆಸಲು ಸುಪ್ರೀಂ ಕೋರ್ಟ್ ರಾಜ್ಯ ಸರ್ಕಾರಕ್ಕೆ ಗಡುವು ವಿಧಿಸಿದೆ. ಸೆಪ್ಟೆಂಬರ್ ಅಂತ್ಯದ ವರೆಗೆ ಕಾಲಾವಕಾಶ ಕೋರಿ ಕರ್ನಾಟಕ ಸರ್ಕಾರ ಹಾಗು ರಾಜ್ಯ ಚುನಾವಣಾ ಆಯೋಗ ಮನವಿ ಸಲ್ಲಿಸಿದ್ದವು. ಮನವಿ ಆಲಿಸಿದ ಸಿಜೆಐ ಅವರನ್ನು ಒಳಗೊಂಡ ನ್ಯಾಯಪೀಠ ಈ ಆದೇಶ ನೀಡಿದೆ.

ಜೂನ್ 30ರೊಳಗೆ ಚುನಾವಣೆಗಳನ್ನು ಪೂರ್ಣಗೊಳಿಸಲು ನಿರ್ದೇಶಿಸಿದ್ದ ಸುಪ್ರೀಂ ಕೋರ್ಟ್‌ನ ಜ.12ರ ಆದೇಶ ಮಾರ್ಪಡಿಸುವಂತೆ ಕೋರಿದ್ದವು.

## ಟೆಸ್ಟ್ ಸರಣಿಯಲ್ಲಿ ಪಾಕಿಸ್ತಾನವನ್ನು 2-0 ಅಂತರದಿಂದ ಸೋಲಿಸಿದ ಬಾಂಗ್ಲಾದೇಶ

# ಡಬ್ಲ್ಯುಟಿಸಿಯಲ್ಲಿ ಭಾರತಕ್ಕೆ ದೊಡ್ಡ ಹಿನ್ನಡೆ

• ಪ್ರಜೋದಯ ವರದಿ

**ನವದೆಹಲಿ:** ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ (ಡಬ್ಲ್ಯುಟಿಸಿ) 2025-27 ಅಂಕ ಪಟ್ಟಿಯಲ್ಲಿ ಟೀಮ್ ಇಂಡಿಯಾಕ್ಕೆ ದೊಡ್ಡ ಹಿನ್ನಡೆಯಾಗಿದೆ. ಬಾಂಗ್ಲಾದೇಶ ರಾಷ್ಟ್ರೀಯ ಕ್ರಿಕೆಟ್ ತಂಡವು ಎರಡು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಪಾಕಿಸ್ತಾನವನ್ನು 2-0 ಅಂತರದಿಂದ ಸೋಲಿಸಿ, ಪಾಯಿಂಟ್ ಪಟ್ಟಿಯಲ್ಲಿ ಭಾರತವನ್ನು ಹಿಂದಿಕ್ಕಿದೆ. ಇತ್ತೀಚಿನ ಶ್ರೇಯಾಂಕದಲ್ಲಿ, ಬಾಂಗ್ಲಾ ದೇಶ ಐದನೇ ಸ್ಥಾನಕ್ಕೇರಿದ್ದರೇ ಭಾರತ ಆರನೇ ಸ್ಥಾನಕ್ಕೆ ಕುಸಿದಿದೆ.

ಬಾಂಗ್ಲಾದೇಶ ಮೊದಲ ಟೆಸ್ಟ್‌ನಲ್ಲಿ ಪಾಕಿಸ್ತಾನವನ್ನು 104 ರನ್‌ಗಳಿಂದ ಸೋಲಿಸಿತ್ತು. ನಂತರ ಅವರು ಎರಡನೇ ಟೆಸ್ಟ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿ 78 ರನ್‌ಗಳಿಂದ ಗೆದ್ದಿದ್ದು ಸರಣಿಯನ್ನು 2-0 ಅಂತರದಿಂದ ವಶಪಡಿಸಿಕೊಂಡಿದೆ. ಈ ಗೆಲುವಿನೊಂದಿಗೆ, ನಾಲ್ಕು ಟೆಸ್ಟ್‌ಗಳಲ್ಲಿ ಎರಡು ಗೆಲುವು, ಒಂದು ಸೋಲು ಮತ್ತು ಒಂದು ಡ್ರಾ ನಂತರ ಬಾಂಗ್ಲಾದೇಶವು ಶೇಕಡಾ 58.33 ಅಂಕಗಳನ್ನು ಪಡೆದುಕೊಂಡಿದೆ.

ಏತನ್ಮಧ್ಯೆ, ಒಂಬತ್ತು ಟೆಸ್ಟ್‌ಗಳ ನಂತರ ಭಾರತೀಯ ರಾಷ್ಟ್ರೀಯ ಕ್ರಿಕೆಟ್ ತಂಡವು ಶೇಕಡಾ 48.15 ಅಂಕಗಳನ್ನು ಹೊಂದಿದೆ. ಭಾರತ ತಂಡವು ಇಲ್ಲಿಯವರೆಗೆ ನಾಲ್ಕು ಪಂದ್ಯಗಳನ್ನು ಗೆದ್ದಿದೆ. ನಾಲ್ಕು ಸೋಲು ಮತ್ತು ಒಂದು ಡ್ರಾವನ್ನು ಹೊಂದಿದೆ. ಶುಭಮನ್ ಗಿಲ್ ನಾಯಕತ್ವದ ತಂಡವು ಈ ವರ್ಷ ಇನ್ನೂ ಒಂದು ಟೆಸ್ಟ್ ಪಂದ್ಯವನ್ನು ಆಡಿಲ್ಲ.

ಭಾರತವು ಯ ಮೊದಲ ಎರಡು ಆವೃತ್ತಿಗಳಲ್ಲಿ ಫೈನಲ್ ತಲುಪಿತ್ತು. ಆದರೆ ಪ್ರಸ್ತುತ ಋತುವಿನಲ್ಲಿ ತಂಡದ ಪ್ರದರ್ಶನವು ನಿರೀಕ್ಷೆಗಳಿಗೆ ತಕ್ಕಂತೆ ಇರಲಿಲ್ಲ. ದಕ್ಷಿಣ ಆಫ್ರಿಕಾದ ವಿರುದ್ಧದ ಟೆಸ್ಟ್ ಸರಣಿಯನ್ನು ಭಾರತ 0-2 ಅಂತರದಿಂದ ತವರಿನಲ್ಲಿ ಸೋತಿತ್ತು. ಇದಲ್ಲದೆ, ಇಂಗ್ಲೆಂಡ್ ಪ್ರವಾಸದಲ್ಲಿ ತಂಡವು ಎರಡು ಸೋಲುಗಳನ್ನು ಅನುಭವಿಸಿತು, ಆದರೂ ಐದು ಪಂದ್ಯಗಳ ಸರಣಿ 2-2 ಡ್ರಾದಲ್ಲಿ ಕೊನೆಗೊಂಡಿತು.



ಏಷ್ಯನ್ ತಂಡಗಳಲ್ಲಿ, ಭಾರತವು ಈಗ ಪಾಕಿಸ್ತಾನ ತಂಡಕ್ಕಿಂತ ಮೇಲಿದೆ. ಆದಾಗ್ಯೂ, ಟೀಮ್ ಇಂಡಿಯಾ ಇನ್ನೂ ಪುಟಿದೇಳುವ ಅವಕಾಶವನ್ನು ಹೊಂದಿದೆ. ಭಾರತವು ಜೂನ್ 6 ರಿಂದ ಅಫ್ಘಾನಿಸ್ತಾನ ರಾಷ್ಟ್ರೀಯ ಕ್ರಿಕೆಟ್ ತಂಡದ ವಿರುದ್ಧ ಏಕೈಕ ಟೆಸ್ಟ್ ಪಂದ್ಯವನ್ನು ಆಡಲಿದೆ.

ಆದರೆ ಈ ಪಂದ್ಯವು ಋತುವಿನ ಭಾಗವಾಗಿರುವುದಿಲ್ಲ. ನಂತರ ಭಾರತ ತಂಡವು ಈ ವರ್ಷ ಶ್ರೀಲಂಕಾ ಮತ್ತು ನ್ಯೂಜಿಲೆಂಡ್ ಪ್ರವಾಸದಲ್ಲಿ ತಲಾ ಎರಡು ಟೆಸ್ಟ್ ಪಂದ್ಯಗಳನ್ನು ಆಡಲಿದೆ. ಆಸ್ಟ್ರೇಲಿಯಾ ವಿರುದ್ಧದ ನಿರ್ಣಾಯಕ ಟೆಸ್ಟ್ ಸರಣಿಯನ್ನು 2027ರಲ್ಲಿ ತವರಿನಲ್ಲಿ ಆಡಲಾಗುವುದು.

ಮತ್ತೊಂದೆಡೆ, ಪಾಕಿಸ್ತಾನ ರಾಷ್ಟ್ರೀಯ ಕ್ರಿಕೆಟ್ ತಂಡದ ಪರಿಸ್ಥಿತಿ ಹದಗೆಟ್ಟಿದೆ. ಪಾಕಿಸ್ತಾನವು ಪ್ರಸ್ತುತ ಋತುವಿನಲ್ಲಿ ನಾಲ್ಕು ಟೆಸ್ಟ್ ಪಂದ್ಯಗಳಲ್ಲಿ ಒಂದನ್ನು ಮಾತ್ರ ಗೆದ್ದಿದೆ ಮತ್ತು ಎಂಟನೇ ಸ್ಥಾನದಲ್ಲಿದೆ. ಎರಡನೇ ಟೆಸ್ಟ್‌ನಲ್ಲಿ 437 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಪಾಕಿಸ್ತಾನ 358 ರನ್‌ಗಳಿಗೆ ಆಲೌಟ್ ಆಯಿತು. ಆಸ್ಟ್ರೇಲಿಯಾ ಪ್ರಸ್ತುತ ಅಂಕಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

ಆಸ್ಟ್ರೇಲಿಯಾ ಎಂಟು ಟೆಸ್ಟ್ ಪಂದ್ಯಗಳಲ್ಲಿ ಏಳನ್ನು ಗೆದ್ದು 87.50 ಪ್ರತಿಶತ ಅಂಕಗಳನ್ನು ಹೊಂದಿದೆ. ನ್ಯೂಜಿಲೆಂಡ್ ಎರಡನೇ ಸ್ಥಾನದಲ್ಲಿದೆ, ನಂತರ ದಕ್ಷಿಣ ಆಫ್ರಿಕಾ ಮೂರನೇ ಸ್ಥಾನದಲ್ಲಿದೆ ಮತ್ತು ಶ್ರೀಲಂಕಾ ನಾಲ್ಕನೇ ಸ್ಥಾನದಲ್ಲಿದೆ.

# ಸ್ಥಳೀಯರಿಗೆ ಕಾಮಗಾರಿ ನೀಡಲು ಗುತ್ತಿಗೆದಾರರ ಮನವಿ

## ಮಾನದಂಡ ಆಧರಿಸಿ ಮೊದಲ ಆದ್ಯತೆ: ಶಾಸಕ

• ಪ್ರಜೋದಯ ವರದಿ

**ಸಕಲೇಶಪುರ:** ಸ್ಥಳಿಯ ವಿದ್ಯುತ್ ಗುತ್ತಿಗೆದಾರರಿಗೆ ಕಾಮಗಾರಿ ನೀಡುವಂತೆ ವಿದ್ಯುತ್ ಗುತ್ತಿಗೆದಾರರ ಸಂಘದ ಸದಸ್ಯರು ಶಾಸಕ ಸಿಮೆಂಟ್ ಮಂಜು ಅವರಿಗೆ ಮನವಿ ಮಾಡಿದರು.

ತಾ.ಪಂ ಸಭಾಂಗಣದಲ್ಲಿ ನಡೆದ ಟಾಸ್ಕ್‌ಫೋರ್ಸ್ ಸಭೆಗೆ ಆಗಮಿಸಿದ ಗುತ್ತಿಗೆದಾರರು ಶಾಸಕರಿಗೆ ಮನವಿ ಸಲ್ಲಿಸಿದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಪ್ರೇಮನಾಥ್, ಸೆಸ್ಕಾಂ, ಜಿ.ಪ.ತಾ.ಪ ಹಾಗೂ ಪುರಸಭೆಯಲ್ಲಿನ ವಿದ್ಯುತ್ ಕಾಮಗಾರಿಗಳು ಬಹುತೇಕ ಹೊರ ಭಾಗದ ಗುತ್ತಿಗೆದಾರರ ಪಾಲಾಗುತ್ತಿವೆ. ಪ್ರಸ್ತುತ ತಾಲ್ಲೂಕಿನ ಸೆಸ್ಕಾಂ ನಿಗಮದಲ್ಲಿ 36 ಕುಡಿಯುವ ನೀರಿನ ಕಾಮಗಾರಿಗಳು ನಡೆಯುತ್ತಿದ್ದು ಇದರಲ್ಲಿ ಹೊರಭಾಗದ ಗುತ್ತಿಗೆದಾರರಿಗೆ ಹೆಚ್ಚು ಕಾಮಗಾರಿ ನೀಡುವ ಮೂಲಕ ಸ್ಥಳೀಯ ಗುತ್ತಿಗೆದಾರರಿಗೆ ವಂಚನೆ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಸ್ಥಳದಲ್ಲೇ ಇದ್ದ ಸೆಸ್ಕಾಂ ಎಇಇ ಹರೀಶ್ ಅವರು ಆಕ್ಷೇಪ ವ್ಯಕ್ತಪಡಿಸಿ,



ಏಪ್ರಿಲ್ 27 ರಂದು ಸ್ಥಳೀಯ ಗುತ್ತಿಗೆದಾರರ ಸಭೆ ನಡೆಸಿ 36 ಕಾಮಗಾರಿ ನಡೆಸುವ ಗುತ್ತಿಗೆದಾರರ ಪಟ್ಟಿಯನ್ನು ಸಿದ್ದಪಡಿಸಿ ನೀಡುವಂತೆ ಸೂಚನೆ ನೀಡಿದ್ದೆ. ಸಭೆ ನಡೆದು ಮೂರು ವಾರಗಳಾದರೂ ಇದುವರೆಗೂ ಪಟ್ಟಿ ನೀಡಿಲ್ಲ. ಮುಂದಿನ ದಿನಗಳಲ್ಲಿ ಮಳೆಗಾಲ ಇರುವುದರಿಂದ ಅನ್ಯರಿಂದ ಕೆಲಸ ಮಾಡಿಸುವುದು ಅನಿವಾರ್ಯವಾಗಿದೆ ಎಂದು ತಿಳಿಸಿದರು.

ಕಚೇರಿಯಲ್ಲಿ ಕೆಲಸ ಮಾಡುವುದು ಕಷ್ಟಕರವಾಗಿದೆ. ಅನವಶ್ಯಕವಾಗಿ ಕೆಲವು ಗುತ್ತಿಗೆದಾರರೆ ಮಾಹಿತಿ ಹಕ್ಕು ಕಾಯ್ದೆಯನ್ನು ದುರ್ಬಳಕೆ ಮಾಡಿಕೊಂಡು ಮಾನಸಿಕವಾಗಿ ಹಿಂಸಿಸುತ್ತಾರೆ. ಅನ್ಯ ಅಧಿಕಾರಿಗಳು ಕೇಳಿದ ದಾಖಲೆಗಳನ್ನು ನೀಡುವ ಗುತ್ತಿಗೆದಾರರು ಸ್ಥಳೀಯ ಅಧಿಕಾರಿಗಳನ್ನು ಲಘುವಾಗಿ ಪರಿಗಣಿಸುತ್ತಾರೆ. ಕಾನೂನು ಪಾಲನೆಯೇ ದೊಡ್ಡ ತೊಡಕಾಗಿದೆ ಎಂದು ದೂರಿದರು.

ಮಧ್ಯ ಪ್ರವೇಶಿಸಿದ ಶಾಸಕ ಸಿಮೆಂಟ್ ಮಂಜು ಅವರು, ಹೊಂದಾಣಿಕೆ ಇಲ್ಲದ ಸ್ಥಳದಲ್ಲಿ ಇಂತಹ ಸಮಸ್ಯೆಗಳು ಉದ್ಭವಿಸುತ್ತವೆ. ಮುಂದಿನ ದಿನಗಳಲ್ಲಿ ಇಲಾಖೆಯ ಮಾನದಂಡವನ್ನು ಆಧರಿಸಿ ಸ್ಥಳೀಯ ಗುತ್ತಿಗೆದಾರರಿಗೆ ಮೊದಲ ಆದ್ಯತೆಯಲ್ಲಿ ಕೆಲಸ ನೀಡಿ ಎಂದು ಸೂಚನೆ ನೀಡಿದರು.

# ಡಿ.ಕೆ.ಶಿವಕುಮಾರ್ ವಿರುದ್ಧ ನಿಖಿಲ್ ನೇರ ವಾಗ್ದಾಳಿ

» ಮೊದಲನೇ ಪುಟದಿಂದ

ಬೆಂಗಳೂರಿನ ಕಚೇರಿಯಲ್ಲಿ ರೈತರ ಹೆಸರಿನಲ್ಲಿ ರಿಯಲ್ ಎಸ್ಟೇಟ್ ದಂಧೆಕೋರರು, ದಲ್ಲಾಳಿಗಳು ಮತ್ತು ಕಾಂಗ್ರೆಸ್ ಏಜೆಂಟರೊಂದಿಗೆ ಸಭೆ ಮಾಡಿದ್ದಾರೆ. ಸಭೆಯಲ್ಲಿ ಭಾಗವಹಿಸಿದ ಮುಖಗಳು ನಿಜವಾಗಿಯೂ ರೈತರನ್ನು ಹೋಲುತ್ತಿದ್ದವೇ. ಅಲ್ಲಿದ್ದ ಒಬ್ಬನ್ನೂ ಹಸಿರು ಟವೆಲ್ ಹಾಕಿರಲಿಲ್ಲವೆಂದರು.

ಟೌನ್‌ಶಿಪ್ ಯೋಜನೆಗೆ ಶೇ.80 ರಷ್ಟು ರೈತರು ಒಪ್ಪಿದ್ದಾರೆಂದು ಹೇಳಿದ್ದಾರೆ. ಯಾವ ರೈತರು ನಿಮಗೆ ಒಪ್ಪಿಗೆ ನೀಡಿದ್ದಾರೆ. ಕೃಷಿ ಕೆಲಸ ಮಾಡಿಕೊಂಡು ಬದುಕುತ್ತಿರುವ ಸಣ್ಣ ಹಿಡುವಳಿದಾರರ ಹೊಟ್ಟೆ ಮೇಲೆ ಹೊಡೆಯಲು ನಾವು ಯಾವ ಕಾರಣಕ್ಕೂ ಬಿಡುವುದಿಲ್ಲ. ಯಾರದೋ ಹೆಸರಲ್ಲಿ ಭೂಮಿ ಖರೀದಿ ರಿಯಲ್ ಎಸ್ಟೇಟ್ ಮಾಡಲು ಮುಂದಾಗಿರುವ ನಿಮ್ಮ ಪ್ರಯತ್ನ ಸಫಲವಾಗುವುದಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು. ಹಾಸನದ ಶಾಸಕ ಹೆಚ್.ಪಿ.ಸ್ವರೂಪ್ ಮತ್ತಿತರರಿದ್ದರು.

## ಮಳೆ ಹಾನಿ ಪ್ರದೇಶಗಳಿಗೆ ಶಾಸಕ ಸುರೇಶ್ ಭೇಟಿ

» ಮೊದಲನೇ ಪುಟದಿಂದ

ಜನಜೀವನ ಅಸ್ತವ್ಯಸ್ತಗೊಂಡಿದ್ದು, ತಕ್ಷಣ ಹೊಸ ಕಂಬಗಳನ್ನು ಅಳವಡಿಸಿ ವಿದ್ಯುತ್ ಸರಬರಾಜು ಪುನರ್ ಆರಂಭಿಸಬೇಕೆಂದು ಸೆಸ್ಕ್ ಅಧಿಕಾರಿಗಳಿಗೆ ಸೂಚಿಸಿದರು. ಮಳೆಯಿಂದ ಹಾನಿಗೊಳಗಾದ ಬೆಳೆ, ಮರಗಳು ಹಾಗೂ ಆಸ್ತಿಪಾಸ್ತಿಗಳ ಸಂಪೂರ್ಣ ಸಮೀಕ್ಷೆ ನಡೆಸಿ, ರೈತರಿಗೆ ಸಕಾಲದಲ್ಲಿ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳುವಂತೆ ಸಂಬಂಧಿತ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.


ಅಕಾಲಿಕ ಮಳೆಯಿಂದ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದು, ಮರಗಳು ಧರೆಗೆ ಬಿದ್ದಿವೆ. ಕೆಲ ಮನೆಗಳ ಛಾವಣಿ ಸಹ ಹಾನಿಗೊಳಗಾಗಿವೆ. ಹೆಚ್ಚು ಹಾನಿಗೊಳಗಾದ ಪ್ರದೇಶಗಳಿಗೆ ಅಧಿಕಾರಿಗಳೊಂದಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇನೆ. ರೈತರಿಗೆ ಹೆಚ್ಚಿನ ನಷ್ಟ ಸಂಭವಿಸಿರುವುದರಿಂದ ಕೃಷಿ, ತೋಟಗಾರಿಕೆ ಹಾಗೂ ಸೆಸ್ಕ್ ಇಲಾಖೆಗಳೊಂದಿಗೆ ಚರ್ಚಿಸಿ ತುರ್ತು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ ಎಂದು ಹೇಳಿದರು.

ಸೆಸ್ಕ್ ಎಇಇ ಬಸವರಾಜು, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಸತೀಶ್ ಕುಮಾರ್, ಕೃಷಿ ಇಲಾಖೆಯ ಹೇಮಂತ್, ಅರಣ್ಯ ಇಲಾಖೆಯ ಮೋಹನ್, ರುದ್ರೇಗೌಡ, ಆನಂದ್, ಗೌತಮ್, ಶಶಿಧರ್, ಪ್ರಸನ್ನ, ಲೋಕೇಶ್ ಉಪಸ್ಥಿತರಿದ್ದರು.

# ನೀಟ್ ಪರೀಕ್ಷೆ: ತಜ್ಞರ ಸಮಿತಿಯಿಂದ ಶಿಫಾರಸ್ಸು ಸಲ್ಲಿಕೆ

• ಪ್ರಜೋದಯ ವರದಿ

**ನವದೆಹಲಿ:** ನೀಟ್-ಯುಜಿ 2026ರ ಪ್ರಶ್ನೆಪತ್ರಿಕೆ ಸೋರಿಕೆ ಹಿನ್ನಲೆಯಲ್ಲಿ ಪರೀಕ್ಷಾ ವ್ಯವಸ್ಥೆಯನ್ನು ಸುಧಾರಿಸಲು ಉನ್ನತ ಮಟ್ಟದ ತಜ್ಞರ ಸಮಿತಿಯ ಶಿಫಾರಸ್ಸುಗಳನ್ನು ಸಲ್ಲಿಸಿದೆ.



ಸಾಂಸ್ಥಿಕ ಸಾಮರ್ಥ್ಯ ಮತ್ತು ಮೇಲ್ವಿಚಾರಣಾ ಕಾರ್ಯವಿಧಾನಗಳನ್ನು ಬಲಪಡಿಸಲು ಹಲವು ಕ್ರಮಗಳನ್ನು ತಜ್ಞರ ಸಮಿತಿಯು ನೀಡಿದೆ. ನೀಟ್ ಯುಜಿ2026 ಪ್ರಶ್ನೆ ಪತ್ರಿಕೆ ಸೋರಿಕೆ ಯಿಂದಾಗಿ 22 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿದೆ. ಹಾಗಾಗಿ ಪರೀಕ್ಷೆಯಲ್ಲಿ ಪಾರದರ್ಶಕತೆ ಹಾಗು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ ಸಲುವಾಗಿ ಎನ್‌ಟಿಎ ಕಟ್ಟುನಿಟ್ಟಿನ ಕ್ರಮ ಜಾರಿಗೊಳಿಸಿದೆ.

ಪ್ರತಿವರ್ಷ 1 ಕೋಟಿ ಗೂ ಅಧಿಕ ಅಭ್ಯರ್ಥಿಗಳು ಭಾಗವಹಿಸುವ ಪರೀಕ್ಷೆಯಲ್ಲಿ ಸಮಗ್ರತೆ, ಪಾರದರ್ಶಕತೆ ಮತ್ತು ದಕ್ಷತೆಯನ್ನು ಹೆಚ್ಚಿಸುವ ಗುರಿಯೊಂದಿಗೆ ಹೊಸ ಕ್ರಮಗಳನ್ನು ಅಳ ವಡಿಸಲಾಗಿದೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಬಳಿಕ ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಿತ ವರ್ಗವು ಎದುರಿಸುತ್ತಿರುವ ಆತಂಕವನ್ನು ಸಂಸ್ಥೆ ಒಪ್ಪಿಕೊಂಡಿದೆ. ಹಾಗಾಗಿ ಅವರ ಆತಂಕವನ್ನು ದೂರ ಮಾಡುವ ಸಲುವಾಗಿ ಸುಧಾರಣಾ ಕ್ರಮಗಳು ಜಾರಿಗೊಳಿಸಲು ಎನ್‌ಟಿಎ ಮುಂದಾಗಿದೆ. ಪರೀಕ್ಷೆಯ ಚೌಕಟ್ಟನ್ನು ಬದಲಾಯಿಸಲು ರಚನಾತ್ಮಕ, ತಾಂತ್ರಿಕ ಮತ್ತು ಮಾನವ ಸಂಪನ್ಮೂಲ ಮಧ್ಯಸ್ಥಿಕೆ ಒಳಗೊಂಡ ಸಮಗ್ರ ಮತ್ತು ನಿರಂತರ ಕಾರ್ಯಕ್ರಮದ ಭಾಗವಾಗಿ ದೆ ಎಂದು ತಿಳಿಸಿದೆ.

### ಹಿರಿಯ ಅಧಿಕಾರಿಗಳ ನೇಮಕ

ಸುಧಾರಣಾ ಕ್ರಮಗಳ ಭಾಗವಾಗಿ, ಭಾರತ ಸರ್ಕಾರವು ಕಳೆದ ಕೆಲವು ದಿನಗಳಿಂದ ಎನ್‌ಟಿಎಯ ಆಡಳಿತದ ನಾಯಕತ್ವವನ್ನು ಬಲಪಡಿಸಲು 4 ಹಿರಿಯ ಅಧಿಕಾರಿಗಳನ್ನು ನಿಯೋಜಿಸಿದೆ. ನೇಮಕಾತಿಯಲ್ಲಿ ಇಬ್ಬರು ಜಂಟಿ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳು ಮತ್ತು ಇಬ್ಬರು ನಿರ್ದೇಶಕ ಮಟ್ಟದ ಅಧಿಕಾರಿಗಳು ಇರಲಿದ್ದಾರೆ. ರಾಧಾಕೃಷ್ಣನ್ ಸಮಿತಿಯ ಶಿಫಾರಸುಗಳ ಪ್ರಕಾರ, ಜಂಟಿ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳು ಸಂಸ್ಥೆಯಲ್ಲಿ ಹೆಚ್ಚುವರಿ ಮಹಾ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಾರೆ. ಕೇಂದ್ರ ಸೇವೆಗಳು ಮತ್ತು ಅಂತರ ಸಚಿವಾಲಯದ ನಿಯೋಜನೆಗಳಿಂದ ಅಧಿಕಾರಿಗಳು ಹೆಚ್ಚುವರಿ ಆಡಳಿತಾತ್ಮಕ ಅನುಭವವನ್ನು ಜಾರಿಗೊಳಿಸುತ್ತಾರೆ. ಇದು ಸಂಸ್ಥೆಯ ಕಾರ್ಯಾಚರಣೆಯ ಸಾಮರ್ಥ್ಯವನ್ನು ಬಲಪಡಿಸುತ್ತದೆಂದು ಹೇಳಿದೆ.

### ವಿಶೇಷ ನಾಯಕತ್ವ ಸ್ಥಾನಗಳು

ಸಂಸ್ಥೆಯು 3 ಪ್ರಮುಖ ತಜ್ಞ ನಾಯಕತ್ವ ಹುದ್ದೆಗಳನ್ನು ಪರಿಚಯಿಸಿದ್ದು, ಅದಕ್ಕಾಗಿ ಅರ್ಜಿ ಕೂಡ ಆಹ್ವಾನಿಸಿದೆ. ಅವುಗಳಲ್ಲಿ ಮುಖ್ಯ ತಂತ್ರಜ್ಞಾನ ಅಧಿಕಾರಿ, ಮುಖ್ಯ ಹಣಕಾಸು ಅಧಿಕಾರಿ ಮತ್ತು ಜನರಲ್ ಮ್ಯಾನೇಜರ್ (ಮಾನವ ಸಂಪನ್ಮೂಲ) ಹುದ್ದೆಗಳನ್ನು ಒಳಗೊಂಡಿವೆ. ಈ ನೇಮಕಾತಿಯು ತಂತ್ರಜ್ಞಾನ, ಹಣಕಾಸು ಮತ್ತು ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ ಉನ್ನತ ಮಟ್ಟದ ಪರಿಣತಿಯನ್ನು ತಂದು ಸಂಸ್ಥೆಯನ್ನು ಹೊಸದಾಗಿ ಮಾರ್ಪಡಿಸಲು ಮತ್ತು ಬಲಿಷ್ಠ ಕಾರ್ಯಾಚರಣೆಯ ವ್ಯವಸ್ಥೆಗಳನ್ನು ಸ್ಥಾಪಿಸಲು ನೆರವಾಲಿವೆ.

ಉನ್ನತ ಮಟ್ಟದ ತಜ್ಞರ ಸಮಿತಿಯ ಶಿಫಾರಸುಗಳು ಮತ್ತು ಶಿಕ್ಷಣ ಸಚಿವಾಲಯ ಹೊರಡಿಸಿದ ನಿರ್ದೇಶನಗಳಿಗೆ ಅನುಗುಣವಾಗಿ ಜಾರಿಗೆ ತರಲಾಗುತ್ತಿರುವ ದೊಡ್ಡ ಸಾಂಸ್ಥಿಕ ಸುಧಾರಣಾ ಕಾರ್ಯಕ್ರಮದ ಭಾಗವಾಗಿ ತನ್ನ ನಾಯಕತ್ವ ತಂಡವನ್ನು ಬಲಪಡಿಸಲಾಗುತ್ತಿದೆ ಎಂದು ಹೇಳಿದೆ.

ಶಿಫಾರಸ್ಸಿನಲ್ಲಿ ಪ್ರಶ್ನೆಪತ್ರಿಕೆ ತಯಾರಿಕೆ, ಅನುವಾದ, ಮುದ್ರಣ ಮತ್ತು ಪರೀಕ್ಷೆಯಲ್ಲಿ ರಚನಾತ್ಮಕ ಬದಲಾವಣೆಗಳನ್ನು ಒಳಗೊಂಡಿವೆ. ಪ್ರತಿ ಹಂತವೂ ತಂತ್ರಜ್ಞಾನದಿಂದ ಪರಿಶೀಲಿಸಿದ ಸುರಕ್ಷತಾ ಕ್ರಮಗಳನ್ನು ಒಳಗೊಂಡಿರಲಿದೆ ಎಂದು ಎನ್‌ಟಿಎ ದೃಢಪಡಿಸಿದೆ.

ಶಿಕ್ಷಣ ಸಚಿವಾಲಯ, ಉನ್ನತ ಶಿಕ್ಷಣ ಇಲಾಖೆ ಮತ್ತು ಆಡಳಿತ ಮಂಡಳಿಯ ನಿಕಟ ಮೇಲ್ವಿಚಾರಣೆ ಮತ್ತು ಬೆಂಬಲದೊಂದಿಗೆ ಮತ್ತಷ್ಟು ಸುಧಾರಣಾ ಕ್ರಮ ಜಾರಿಗೆ ತರಲಾಗುವುದೆಂದು ಸಂಸ್ಥೆ ತಿಳಿಸಿದೆ.

# ಕ್ರಿಕೆಟ್ ಸಮ್ಮಿಲನ ಯಶಸ್ಸು: ಅಭಿನಂದನೆ

» ಮೊದಲನೇ ಪುಟದಿಂದ

ಮುಂದೆ ಪರಿಸ್ಥಿತಿ ನೋಡಿಕೊಂಡು ಪ್ರತಿ ವರ್ಷ ಮುಂದುವರಿಸಿಕೊಂಡು ಹೋಗೋಣವೆಂದರು.

ಉಪಾಧ್ಯಕ್ಷ ಜಿ.ಪ್ರಕಾಶ್ ಅವರು ಮಾತನಾಡಿ, ಕಡಿಮೆ ಅವಧಿಯಲ್ಲಿ ರಾಜ್ಯಮಟ್ಟದ ಸ್ಪರ್ಧೆ ರೀತಿಯಲ್ಲೇ ಕ್ರೀಡಾಕೂಟ ಯಶಸ್ವಿಗೊಳಿಸಿದ್ದು, ಎಲ್ಲಾ ಅಧಿಕಾರಿಗಳು ಭಾಗಿಯಾಗಿದ್ದ ಮಾದರಿಯಾಗಿದೆ ಎಂದರು.

ಕಾರ್ಯದರ್ಶಿ ಕೆ.ಎಂ.ಹರೀಶ್ ಅವರು ಮಾತನಾಡಿ, 16 ಇಲಾಖೆಗಳ ತಂಡಗಳನ್ನು ಒಂದೆಡೆ ಸೇರಿಸಿದ್ದಕ್ಕೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ರಣಜಿ ಮಾದರಿ ಪಂದ್ಯ ಆಯೋಜಿಸಲಾಗಿತ್ತು ಎಂದು ಅನೇಕರು ಹೊಗಳಿದರು. ಇದು ನಮಗೆ ಸ್ಫೂರ್ತಿ ತಂದಿದೆ. ಕ್ರೀಡಾ ಸಮಿತಿಯವರು ತಮ್ಮ ಮನೆಯ ಕೆಲಸದಂತೆ ಸಂಘಟನಾತ್ಮಕವಾಗಿ ಕೆಲಸ ಮಾಡಿದ್ದರಿಂದ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದೆ ಎಂದರು.

ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ ಅವರು ಮಾತನಾಡಿ, ಇದು ನಿಜಕ್ಕೂ ಮಾದರಿ ಕ್ರೀಡಾಕೂಟ, ಆಯೋಜನೆ ಬಗ್ಗೆ ಪ್ರಶಂಸೆಯ ಮಾತುಗಳು ಕೇಳಿ ಬಂದವು, ಮುಂದೆ ಇದೇ ರೀತಿ ಸಾಗೋಣ ಎಂದರು.

ಕ್ರೀಡಾ ಸಮಿತಿ ಸಂಚಾಲಕ ಪ್ರಕಾಶ್ ಬೆಳವಾಡಿ ಅವರು ಮಾತನಾಡಿ, ಮೊದಲ ಬಾರಿಗೆ ಕ್ರಿಕೆಟ್ ಸಮ್ಮಿಲನವನ್ನು ಯಶಸ್ವಿಗೊಳಿಸಿದ್ದು ಸಂತಸ ತರಿಸಿದೆ. ಈ ರೀತಿಯ ಪಂದ್ಯಾವಳಿ ಯಾರೂ ಮಾಡಿರಲಿಲ್ಲವೆಂದು ಅಧಿಕಾರಿಗಳು ಹೇಳಿದ್ದಾರೆಂದರು. ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್ ಸ್ವಾಗತಿಸಿದರು. ಕ್ರೀಡಾಕೂಟ ಯಶಸ್ಸಿಗೆ ಶ್ರಮಿಸಿದ ಕ್ರೀಡಾ ಸಮಿತಿಯ ಎಲ್ಲರನ್ನೂ ಅಭಿನಂದಿಸಲಾಯಿತು.

## ಮೆಡಿಕಲ್ ಶಾಪ್‌ಗಳ ಬಂದ್‌ಗೆ ಜಿಲ್ಲೆಯಲ್ಲಿ ನೈತಿಕ ಬೆಂಬಲ

» ಮೊದಲನೇ ಪುಟದಿಂದ

ಸಂಕಷ್ಟಕ್ಕೆ ಸಿಲುಕಿದ್ದಾರೆ. ಆನ್‌ಲೈನ್ ಔಷಧ ಮಾರಾಟ ಮಾಡುತ್ತಿರುವುದರಿಂದ ನಕಲಿ ವೈದ್ಯರ ಚೀಟಿಗಳ ಬಳಕೆ ಹೆಚ್ಚುತ್ತಿವೆ. ದೊಡ್ಡ ವ್ಯಾಪಾರ ಸಂಸ್ಥೆಗಳು ಭಾರೀ ಪ್ರಮಾಣದ ರಿಯಾಯಿತಿ ನೀಡುವ ಮೂಲಕ ಮಾರುಕಟ್ಟೆ ಸಮತೋಲನ ಹಾಳು ಮಾಡುತ್ತಿವೆ ಎಂದು ದೂರಿದರು.

ಕೊರೊನಾ ಅವಧಿಯಲ್ಲಿ ಜಾರಿಗೊಂಡಿದ್ದ ಅಧಿಸೂಚನೆಯನ್ನು ಹಿಂಪಡೆಯಬೇಕು. ಆನ್‌ಲೈನ್ ಔಷಧ ಮಾರಾಟಕ್ಕೆ ಸಂಬಂಧಿಸಿದ ನಿಯಮಗಳನ್ನು ರದ್ದುಪಡಿಸಿ, ದೊಡ್ಡ ವ್ಯಾಪಾರ ಸಂಸ್ಥೆಗಳ ಅತಿಯಾದ ರಿಯಾಯಿತಿಗೆ ಕಡಿವಾಣ ಹಾಕಬೇಕೆಂದು ಒತ್ತಾಯಿಸಿದರು.

ಜಿಲ್ಲಾ ಔಷಧ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಎಂ. ಸಣ್ಣಮಂಜೇಗೌಡ,ಪ್ರಧಾನ ಕಾರ್ಯದರ್ಶಿ ಗಿರಿಗೌಡ, ಜಿಲ್ಲಾ ಪ್ರತಿ ನಿಧಿ ಎಸ್.ಎಸ್.ಸಂತೋಷ್‌ಜೈನ್ ಇದ್ದರು.

# ಜಾತಿ ವೈಷಮ್ಯ ಬಿಟ್ಟು ಸಹಬಾಳ್ವೆಯಿಂದ ಬದುಕಿ

## ಶಾಂತಿ ಸಭೆಯಲ್ಲಿ ಶಾಸಕ ಹೆಚ್.ಕೆ.ಸುರೇಶ್ ಸಲಹೆ

• ಪ್ರಜೋದಯ ವರದಿ

**ಬೇಲೂರು:** ಗ್ರಾಮದ ಜನರು ಸೌಹಾರ್ದಯುತವಾಗಿ ಬದುಕಿದಾಗ ಮಾತ್ರ ಗ್ರಾಮಗಳ ಅಭಿವೃದ್ಧಿ ಸಾಧ್ಯವಾಗುತ್ತದೆ. ಜಾತಿ ವೈಷಮ್ಯ ಬೆಳೆಸಿಕೊಳ್ಳದೆ ಪರಸ್ಪರ ಸಹಬಾಳ್ವೆಯಿಂದ ಬದುಕಬೇಕೆಂದು ಶಾಸಕ ಹೆಚ್.ಕೆ.ಸುರೇಶ್ ಅವರು ಹೇಳಿದರು.




ತಾಲ್ಲೂಕಿನ ಇಬ್ಬೀಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊಸಹಳ್ಳಿ ಗ್ರಾಮದಲ್ಲಿ ಎರಡು ಸಮುದಾಯಗಳ ನಡುವೆ ಉಂಟಾಗಿರುವ ಜಾತಿ ವೈಷಮ್ಯ ಹಾಗು ಉದ್ವಿಗ್ನ ಪರಿಸ್ಥಿತಿ ಹಿನ್ನಲೆ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಿದ್ದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮದಲ್ಲಿ ದಲಿತ ಸಮುದಾಯ ಮತ್ತು ಗಂಗಾಮತಸ್ಥರು ಹಲವು ವರ್ಷಗಳಿಂದ ಸಾಮರಸ್ಯದಿಂದ ಬದುಕು ಸಾಗಿಸುತ್ತಿದ್ದು, ಜಾತ್ರೆ ವಿಚಾರವಾಗಿ ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಜಾತಿ ನಿಂದನೆ ಹಾಗು ಮಹಿಳೆಯರ ಬಗ್ಗೆ ಅವಹೇಳನಕಾರಿ ಬರ ಹಗಳನ್ನು ಹರಿಬಿಟ್ಟ ಪರಿಣಾಮ ಎರಡು ಕೋಮಿನ ನಡುವೆ ಮಾತಿನ ಚಕಮಕಿ ನಡೆಯಿತು. ಅದರಿಂದ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು, ಕೆಲವು ಪೊಲೀಸ್ ಪ್ರಕರಣಗಳಿಗೂ ಕಾರಣವಾಗಿದೆ ಎಂದು ಹೇಳಿದರು.

ಈ ಹಿನ್ನಲೆ ಮುಂದಿನ ದಿನಗಳಲ್ಲಿ ಗ್ರಾಮದಲ್ಲಿ ಶಾಂತಿ, ಸಾಮರಸ್ಯ ಮತ್ತು ಸೋದರತ್ವ ಕಾಪಾಡುವ ಉದ್ದೇಶದಿಂದ ಶಾಂತಿ ಸಭೆ ಕರೆಯಲಾಗಿದೆ. ಈಗಾಗಲೇ ಎರಡೂ ಸಮುದಾಯಗಳ ಮುಖಂಡರು ತಮ್ಮ ಅಭಿಪ್ರಾಯ ಹಾಗು ಸಲಹೆಗಳನ್ನು ನೀಡಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಯಾವುದೇ ವಿಷಯ ಹಂಚಿಕೊಳ್ಳುವ ಮುನ್ನ ಯೋಚಿಸಿ ನಡೆದುಕೊಳ್ಳಬೇಕು. ಹೊಸಹಳ್ಳಿ ಗ್ರಾಮದಲ್ಲಿ ದಲಿತರು ಹಾಗೂ ಗಂಗಾಮತಸ್ಥರು ಒಗ್ಗಟ್ಟಿನಿಂದ ಬದುಕಲು ಮುಂದಾ ಗಬೇಕು. ಶಾಂತಿ ಸಭೆಯ ನಂತರವೂ ಗ್ರಾಮದಲ್ಲಿ ಗೊಂದಲ ಸೃಷ್ಟಿಸಲು ಯತ್ನಿಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚನೆ ನೀಡಿದರು.

ಗಂಗಾಮತಸ್ಥ ಮುಖಂಡರಾದ ಮಮತಾ ಹಾಗು ಜಗದೀಶ್ ಮಾತನಾಡಿ, ಗ್ರಾಮದಲ್ಲಿ ಅನಾದಿ ಕಾಲದಿಂದಲೂ ಜಾತ್ರೆ ಮತ್ತು ಹಬ್ಬಗಳನ್ನು ಎಲ್ಲರೂ ಸೇರಿ ಆಚರಿಸುತ್ತಾ ಬಂದಿದ್ದೇವೆ. ಗಂಗಾ ಜಯಂತಿಯನ್ನು ಮಾತ್ರ ನಮ್ಮ ಸಮುದಾಯ ಪ್ರತ್ಯೇಕವಾಗಿ ಆಚರಿಸುವ ಪದ್ಧತಿ ಇದೆ. ಈ ವಿಚಾರದಲ್ಲೇ ಗೊಂದಲ ಉಂಟಾಗಿದೆ. ನಮ್ಮ ಜಾತಿ ಹಾಗೂ ಮಹಿಳೆಯರ ಬಗ್ಗೆ ಅವಹೇಳನ ಕಾರಿ ಮಾತುಗಳಾಡಿರುವವರು ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು.

ಸಕಲೇಶಪುರ ಉಪ ವಿಭಾಗಾಧಿಕಾರಿ ತಿಮ್ಮಣ್ಣ, ತಹಶೀಲ್ದಾರ್ ಸಂತೋಷ್, ಇಓ ಸತೀಶ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಲಿಂಗರಾಜು, ಸಿಪಿಐ ರೇವಣ್ಣ ಹಾಗು ಪಿಎಸ್‌ಐ ಶಿವಾನಂದ ಪಾಟೀಲ್ ಸೇರಿ ವಿವಿಧ ಸಮುದಾಯಗಳ ಮುಖಂಡರು ಮತ್ತು ಗ್ರಾಮಸ್ಥರು ಭಾಗವಹಿಸಿದ್ದರು.

# ಕೆಪಿಎಸ್-ಮ್ಯಾಗ್ನೆಟ್ ಶಾಲೆಗೆ ಗ್ರಾಮಸ್ಥರ ವಿರೋಧ

• ಪ್ರಜೋದಯ ವರದಿ

**ಹಾಸನ:** ಕೆಪಿಎಸ್-ಮ್ಯಾಗ್ನೆಟ್ ಶಾಲೆ ಹೆಸರಿನಲ್ಲಿ ಗ್ರಾಮೀಣ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವ ಸರ್ಕಾರದ ಕ್ರಮ ವಿರೋಧಿಸಿ ಅರಸೀಕೆರೆ ತಾಲ್ಲೂಕಿನ ಕೆರೆಕೋಡಿಹಳ್ಳಿ- ಧನಂಜಯಪುರ ಗ್ರಾಮದಲ್ಲಿ ಎಐಡಿಎಸ್‌ಓ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.




ಜಾವಗಲ್ ಕೆಪಿಎಸ್ ಶಾಲೆಗೆ ಧನಂಜಯಪುರ ಸರ್ಕಾರಿ ಶಾಲೆಯನ್ನು ವಿಲೀನಗೊಳಿಸುವ ಪ್ರಕ್ರಿಯೆಯನ್ನು ತಕ್ಷಣ ಕೈಬಿಡಬೇಕು. ನಮ್ಮೂರ ಶಾಲೆ ನಮ್ಮೂರಲ್ಲೇ ಉಳಿಯಲಿ ಎಂದು ಒಕ್ಕೊರಲಿನಿಂದ ಆಗ್ರಹಿಸಿದರು.

ಎಐಡಿಎಸ್‌ಓ ಜಿಲ್ಲಾಧ್ಯಕ್ಷೆ ಚೈತ್ರಾ ಅವರು ಮಾತನಾಡಿ, ಸರ್ಕಾರಿ ಶಾಲೆಗಳನ್ನು ಮುಚ್ಚುವ ಮೂಲಕ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳನ್ನು ಅನಕ್ಷರರನ್ನಾಗಿಸುವ ಪಿತೂರಿ ನಡೆಯು ತ್ತಿದೆ. ಸರ್ಕಾರದ ನಿರ್ಧಾರ ಖಂಡಿಸಿ ರಾಜ್ಯಾದ್ಯಂತ ಹೋರಾಟ ನಡೆಸಲಾಗುತ್ತಿದೆ. ಅರಸೀಕೆರೆ ತಾಲ್ಲೂಕಿನ ದೊಡ್ಡಮೇಟಿ ಕುರ್ಕೆ ಭಾಗದಲ್ಲೂ ಕೂಡ ಮ್ಯಾಗ್ನೆಟ್ ಶಾಲೆಗೆ ವಿರೋಧ ವ್ಯಕ್ತವಾಗಿದೆ ಎಂದರು.

ಗ್ರಾಮೀಣ ಭಾಗದ ಬಡ ಮಕ್ಕಳಿಗೆ ಸಮೀಪದಲ್ಲಿರುವ ಸರ್ಕಾರಿ ಶಾಲೆಯೇ ಆಶಾಕಿರಣ. ಅದನ್ನು ಕಿತ್ತುಕೊಂಡರೆ ಮಕ್ಕಳು ಶಿಕ್ಷಣದಿಂದ ವಂಚಿತರಾಗುವ ಅಪಾಯ ಇದೆ. ಹೀಗಾಗಿ ಕೊನೆಯವರೆಗೂ ಹೋರಾಟ ನಡೆಸಿ ನಮ್ಮೂರಿನ ಶಾಲೆಯನ್ನು ಉಳಿಸಿಕೊಳ್ಳಬೇಕೆಂದರು.

ಗ್ರಾಮಸ್ಥ ಹಿತೇಂದ್ರ ಅವರು ಮಾತನಾಡಿ, ನಮ್ಮ ಊರಿಗೆ ಬೆಳಿಗ್ಗೆ ಮತ್ತು ಸಂಜೆ ಒಂದೊಂದು ಬಸ್ ಮಾತ್ರ ಬರುತ್ತದೆ. ಜಾವಗಲ್‌ಗೆ ಹೋಗಬೇಕಾದರೆ ಕೆರೆ ಏರಿ ಮೇಲಿನಿಂದ ಹೋಗಬೇಕು. ಮಳೆಗಾಲದಲ್ಲಿ ಅದು ಇನ್ನಷ್ಟು ಅಪಾಯಕಾರಿ. ಇಂತಹ ಪರಿಸ್ಥಿತಿಯಲ್ಲಿ ಚಿಕ್ಕ ಮಕ್ಕಳನ್ನು ಪ್ರತಿದಿನ ದೂರದ ಶಾಲೆಗೆ ಹೇಗೆ ಕಳುಹಿಸಬೇಕೆಂದು ಪ್ರಶ್ನಿಸಿದರು.

ಈಗಾಗಲೇ ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳೇ ಸರಿಯಾದ ಬಸ್ ವ್ಯವಸ್ಥೆ ಇಲ್ಲದೆ ಪರದಾಡುತ್ತಿದ್ದಾರೆ. ವರ್ಷಗಳಿಂದ ಮೂಲಭೂತ ಸಾರಿಗೆ ಸೌಲಭ್ಯ ಕಲ್ಪಿಸದ ಸರ್ಕಾರ ಈಗ ಮಕ್ಕಳನ್ನು ದೂರದ ಶಾಲೆಗೆ ಕಳುಹಿಸುತ್ತೇವೆಂದು ಹೇಳುವುದನ್ನು ನಾವು ಹೇಗೆ ನಂಬಬೇಕೆಂದು ಆಕ್ರೋಶ ವ್ಯಕ್ತಪಡಿಸಿದರು.

ನಮ್ಮೂರಿನ ಶಾಲೆಯನ್ನು ಮುಚ್ಚುವ ಬದಲು ಸರ್ಕಾರ ಶಾಲೆಗೆ ಅಗತ್ಯ ಶಿಕ್ಷಕರು, ಕಟ್ಟಡ, ಶೌಚಾಲಯ, ಕುಡಿಯುವ ನೀರು ಸೇರಿ ಇತರ ಮೂಲಸೌಕರ್ಯ ಒದಗಿಸಬೇಕು. ಶಾಲೆ ಮುಚ್ಚುವುದು ಎಂದರೆ ಗ್ರಾಮೀಣ ಮಕ್ಕಳ ಶಿಕ್ಷಣವನ್ನೇ ಮೊಟಕುಗೊಳಿಸಿದಂತಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಶಾಲೆ ಮುಚ್ಚಿದ ಪರಿಣಾಮ ಶಾಲೆಬಿಟ್ಟು ಹೋಗುವ ಮಕ್ಕಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು.

ಎಐಡಿಎಸ್‌ಓ ಕಾರ್ಯದರ್ಶಿ ಸುಷ್ಮಾ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯೆ ಕಾವ್ಯ ಹಿತೇಂದ್ರ, ಎಸ್‌ಡಿಎಂಸಿ ಅಧ್ಯಕ್ಷ ನರಸಿಂಹಮೂರ್ತಿ, ಗ್ರಾಮಸ್ಥರಾದ ಗಿರೀಶ್, ಚೇತನ್, ಶರತ್, ತಿಮ್ಮಪ್ಪ, ಲಕ್ಷ್ಮಣ್, ಮಲ್ಲೇಶ್, ಬೀರಣ್ಣ, ದೇವರಾಜು, ವಿಶ್ವನಾಥ್, ಸುನೀಲ್, ಹರೀಶ್, ಗಂಗಾಧರ್ ಇತರರು ಭಾಗವಹಿಸಿದ್ದರು.

## 15 ಗ್ರಾಂ ತೂಕದ ಚಿನ್ನಾಭರಣ, ನಗದು ಕಳವು



• ಪ್ರಜೋದಯ ವರದಿ

**ಹಾಸನ:** ಮನೆ ಬಾಗಿಲ ಬೀಗ ಮುರಿದು ಒಳನುಗ್ಗಿರುವ ಕಳ್ಳರು 15 ಗ್ರಾಂ ತೂಕದ ಚಿನ್ನಾ ಭರಣ ಹಾಗು 10 ಸಾವಿರ ರೂ. ನಗದು ಕಳವು ಮಾಡಿರುವ ಘಟನೆ ನಗರದ ಬಿ.ಕಾಟೀಹಳ್ಳಿ ಯಲ್ಲಿ ನಡೆದಿದೆ.

ಬಡಾವಣೆಯ ಗೌರಮ್ಮ ಎಂಬುವವರ ಮನೆಯಲ್ಲಿ ಏ.12ರಂದು ಕಳ್ಳತನವಾಗಿದ್ದು ತಡವಾಗಿ ದೂರು ದಾಖಲಿಸಿದ್ದಾರೆ. ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸಮೇತ ಕಬ್ಬತ್ತಿ ಗ್ರಾಮದ ಸಂಬಂಧಿಕರ ಮನೆಗೆ ತೆರಳಿದ್ದರು. ಮಾರನೇ ದಿನ ಬಂದು ನೋಡಿದಾಗ ಮನೆ ಬಾಗಿಲು ಮುರಿದಿರುವುದು ಗೊತ್ತಾಗಿದೆ. ಬೀರುವಿನಲ್ಲಿಟ್ಟಿದ್ದ 10 ಸಾವಿರ ರೂ. ನಗದು, 10 ಗ್ರಾಂ ತೂಕದ ಚಿನ್ನದ ಉಂಗುರ, 5 ಗ್ರಾಂ ತೂಕದ ಚಿನ್ನದ ಗುಂಡು ಕಳುವಾಗಿದೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## 40 ಲಕ್ಷ ರೂ. ವೆಚ್ಚದ ರಸ್ತೆಗೆ ಭೂಮಿಪೂಜೆ



• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಯರೇಹಳ್ಳಿ ಗ್ರಾಮದಲ್ಲಿ ಕೈಗೊಂಡಿರುವ 40 ಲಕ್ಷ ರೂ. ವೆಚ್ಚದ ಕಾಂಕ್ರಿಟ್ ರಸ್ತೆ ಕಾಮಗಾರಿಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಬುಧವಾರ ಭೂಮಿಪೂಜೆ ನೆರವೇರಿಸಿ ದರು.

ಈ ವೇಳೆ ಮಾತನಾಡಿದ ಶಾಸಕರು, ಆದಷ್ಟು ಬೇಗ ಕಾಮಗಾರಿ ಮುಗಿಸಿ ಜನರ ಓಡಾಟಕ್ಕೆ ಅನುಕೂಲ ಕಲ್ಪಿಸಲು ಅಧಿಕಾರಿ ಹಾಗು ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಯರೇಹಳ್ಳಿ ಗ್ರಾಮದ ಇನ್ನಷ್ಟು ಸಮಸ್ಯೆಗಳ ಕುರಿತು ಸ್ಥಳೀಯರು ಗಮನಕ್ಕೆ ತಂದಿದ್ದಾರೆ. ಹಂತ ಹಂತವಾಗಿ ಪರಿಹಾರ ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.

ನಂತರ ಹಾಸನ ವಿಧಾನಸಭಾ ಕ್ಷೇತ್ರದ ಕಡಗ ಗ್ರಾಮದಲ್ಲಿ ನಿರ್ಮಿಸಿರುವ ಅಂಗನವಾಡಿ ಕಟ್ಟಡವನ್ನು ಮಕ್ಕಳ ಕೈಯಿಂದಲೇ ಉದ್ಘಾಟಿಸುವ ಮೂಲಕ ಶಾಸಕರು ಮಾದರಿಯಾದರು. ಮಕ್ಕಳಿಗೆ ಶಾಲಾ ಪೂರ್ವ ಶಿಕ್ಷಣ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಮಕ್ಕಳಿಗೆ ಸುಸಜ್ಜಿತ ಅಂಗನವಾಡಿ ಕಟ್ಟಡ ನಿರ್ಮಾಣ ಮಾಡಿ ಗುಣಮಟ್ಟದ ಶಿಕ್ಷಣ ನೀಡುವ ಸಲುವಾಗಿ ಶ್ರಮ ವಹಿಸಲಾಗುತ್ತಿದೆ ಎಂದರು.

ಗ್ರಾಮಸ್ಥರು, ಪಕ್ಷದಮುಖಂಡರು ಇತರರು ಹಾಜರಿದ್ದರು.

# ಡಿಎ ಪಾವತಿಗೆ ಬಿಎಸ್‌ಎನ್‌ಎಲ್ ನಿವೃತ್ತ ನೌಕರರ ಆಗ್ರಹ

• ಪ್ರಜೋದಯ ವರದಿ

**ಹಾಸನ:** ಕೇಂದ್ರ ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದ ಪಿಂಚಣಿದಾರರು ಆರ್ಥಿಕವಾಗಿ ಸಂಕಷ್ಟ ಅನುಭವಿಸುತ್ತಿದ್ದಾರೆಂದು ಆರೋಪಿಸಿ ಬಿ.ಎಸ್.ಎನ್.ಎಲ್. ನಿವೃತ್ತ ನೌಕರರ ಸಂಘಟನೆ ವತಿಯಿಂದ ಬುಧವಾರ ಪ್ರತಿಭಟನೆ ನಡೆಯಿತು.




ನಗರದ ಬಿ.ಎಂ.ರಸ್ತೆ ಬಳಿ ಇರುವ ಬಿ.ಎಸ್.ಎನ್.ಎಲ್. ಕಚೇರಿ ಆವರಣದಲ್ಲಿ ನಡೆದ ಪ್ರತಿ ಭಟನೆಯಲ್ಲಿ ನೂರಕ್ಕೂ ಅಧಿಕ ನಿವೃತ್ತ ನೌಕರರು ಭಾಗವಹಿಸಿ ತಮ್ಮ ಬೇಡಿಕೆಗಳನ್ನೊಳಗೊಂಡ ಫಲಕಗಳನ್ನು ಹಿಡಿದು, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬಿ.ಎಸ್.ಎನ್.ಎಲ್. ನಿವೃತ್ತ ನೌಕರ ಸಂಪತ್ ಕುಮಾರ್ ಅವರು ಮಾತನಾಡಿ, ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಹೊಸ ನಿಯಮಗಳನ್ನು ಸೇರಿಸುವ ಮೂಲಕ ಪೆನ್ಷನ್ ರಿವಿಷನ್ ಹಾಗು ಟಿಎ ನೀಡುವ ಪ್ರಕ್ರಿಯೆಗೆ ಅಡ್ಡಿ ಉಂಟುಮಾಡಿದೆ. ಇತ್ತೀಚಿನ ನೀತಿಗಳ ಪ್ರಕಾರ ಭವಿಷ್ಯದಲ್ಲಿ ಯಾವುದೇ ಪೇ ಕಮಿಷನ್ ಅಥವಾ ರಿವಿಷನ್ ನಡೆದರೂ ಅದರ ಅನುಸಾರ ಪಿಂಚಣಿ ಪರಿಷ್ಕರಣೆ ಮಾಡುವುದಿಲ್ಲ ಹಾಗು ಟಿಎ ನೀಡುವುದಿಲ್ಲ ಎಂಬ ರೀತಿಯ ಅಸ್ಪಷ್ಟತೆ ಉಂಟಾಗಿದೆ ಎಂದು ಹೇಳಿದರು.

2026 ಜನವರಿಯಿಂದ ನೀಡಬೇಕಾಗಿದ್ದ ಡಿಎ ಪಾವತಿಯನ್ನು ಸರ್ಕಾರ ತಡೆಹಿಡಿದಿರುವುದು ಖಂಡನೀಯ. ಅಫಂಡಬಿಲಿಟಿ ಎಂಬ ಷರತ್ತು ವಿಧಿಸುವ ಮೂಲಕ ಸರ್ಕಾರ ಹೊಣೆಗಾರಿಕೆ ಯಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತಿದೆ. ಇದು ನಿವೃತ್ತ ನೌಕರರ ಮೇಲಿನ ಅನ್ಯಾಯವಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ದಿನದಿಂದ ದಿನಕ್ಕೆ ಬೆಲೆ ಏರಿಕೆ ಹೆಚ್ಚಾಗುತ್ತಿದ್ದು, ಸಾಮಾನ್ಯ ಜೀವನ ನಡೆಸುವುದೇ ಕಷ್ಟಕರವಾಗಿದೆ. ಇಂತಹ ಸಂದರ್ಭದಲ್ಲಿ ಡಿಎ ತಡೆಹಿಡಿದಿರುವುದು ಪಿಂಚಣಿ ದಾರರ ಬದುಕಿಗೆ ಮತ್ತಷ್ಟು ಹೊರೆ ತಂದಿದೆ. ಆದ್ದರಿಂದ ಸರ್ಕಾರ ತಕ್ಷಣ ಕ್ರಮ ಕೈಗೊಂಡು ಬಾಕಿ ಇರುವ ಡಿಎ ಬಿಡುಗಡೆ ಮಾಡಬೇಕು ಹಾಗೂ ಪೆನ್ಷನ್ ಸಂಬಂಧಿತ ಎಲ್ಲಾ ಸಮಸ್ಯೆಗಳನ್ನು ಶೀಘ್ರ ಪರಿಹರಿಸಬೇಕೆಂದು ಒತ್ತಾಯಿಸಿದರು.

ಎಲ್ಲಾ ಪೆನ್ಷನ್ ಸಂಘಟನೆಗಳು ಒಗ್ಗಟ್ಟಿನಿಂದ ಈ ಹೋರಾಟ ನಡೆಸುತ್ತಿದ್ದು, ಸರ್ಕಾರ ಸ್ಪಂದಿಸ ದಿದ್ದಲ್ಲಿ ಮುಂದಿನ ದಿನಗಳಲ್ಲಿ ಇನ್ನಷ್ಟು ತೀವ್ರ ಹೋರಾಟ ಕೈಗೊಳ್ಳಲಾಗುವುದೆಂದು ಪ್ರತಿಭಟ ನಾಕಾರರು ತಿಳಿಸಿದರು. ನಿವೃತ್ತ ನೌಕರರಾದ ಶಿವಣ್ಣ, ಕಾಂತರಾಜು, ರಾಜು, ಫೈರೋಜ್, ಸಿದ್ದೇಗೌಡ, ದೇವರಾಜು, ನಾಗರಾಜ್, ರಾಮಚಂದ್ರ, ನಿರ್ವಾಹಣೇಗೌಡ ಇದ್ದರು.

# ಕಾಡಾನೆ ಪೀಡಿತ ಪ್ರದೇಶದ ಮಕ್ಕಳ ವಿದ್ಯಾಭ್ಯಾಸ ಅತಂತ್ರ

» ಮೊದಲನೇ ಪುಟದಿಂದ

ಬಡವರು, ಕೂಲಿ ಕಾರ್ಮಿಕರೇ ಆಗಿರುವುದರಿಂದ ಅನಿವಾರ್ಯವಾಗಿ ಕಾಡಾನೆ ಹಾವಳಿಯ ನಡುವೆಯೂ ಮಕ್ಕಳನ್ನು ಶಾಲೆಗಳಿಗೆ ಕಳುಹಿಸಬೇಕಿದೆ. ಕೆಲ ಸ್ಥಿತಿವಂತರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸುವುದರಿಂದ ಶಾಲಾ ವಾಹನಗಳಲ್ಲಿ ಕಳುಹಿಸುತ್ತಿದ್ದಾರೆ. ಬಡವರು, ಖಾಸಗಿ ಶಾಲೆ ಶುಲ್ಕ, ವಾಹನ ಬಾಡಿಗೆ ನೀಡಲಾಗದೆ ಜೀವದ ಹಂಗು ತೊರೆದು ಅಪಾಯ ಎದುರಿಸಿಕೊಂಡೇ ಮಕ್ಕಳ ನ್ನು ಸರ್ಕಾರಿ ಶಾಲೆಗೆ ಕಳುಹಿಸುತ್ತಿದ್ದಾರೆ.

ಕೆಲ ಶಾಲೆಗಳು ಅರಣ್ಯ ಪ್ರದೇಶಕ್ಕೆ ಹೊಂದಿ ಕೊಂಡತಿರುವುದರಿಂದ ಯಾವ ಸಂದರ್ಭದಲ್ಲಿ ಅಪಾಯ ಎದುರಾಗುತ್ತದೆ ಎಂದು ಊಹಿ ಸಲು ಸಾಧ್ಯವಾಗುವುದಿಲ್ಲ. ಕಾಡಾನೆಗಳು ಶಾಲೆಯ ಮುಂದೆಯೇ ಹೋಗಿರುವುದು, ಶಾಲೆ ಬಳಿಗೆ ಬಂದಿರುವ ಸಾಕಷ್ಟು ಉದಾಹರಣೆಗಳು ಜಿಲ್ಲೆಯಲ್ಲಿವೆ. ಹೀಗಾಗಿ ಮಕ್ಕಳು ಮಾತ್ರವಲ್ಲದೇ ಶಿಕ್ಷಕರು ಶಾಲೆಗೆ ಬರಲು ಹೆದರುವ ಪರಿಸ್ಥಿತಿ ಮಲೆನಾಡು ಭಾಗದಲ್ಲಿ ಎದುರಾಗಿದೆ.

### ಕೆಪಿಎಸ್ ಶಾಲೆ ನಿರ್ಮಿಸಲು ಯೋಜನೆ

ಕಾಡಾನೆ ಸಂಘರ್ಷ ಇರುವ ಕಡೆಗಳಲ್ಲಿ 7 ಕಿಲೋ ಮೀಟರ್ ವ್ಯಾಪ್ತಿಯಲ್ಲಿನ ಸರ್ಕಾರಿ ಶಾಲೆಗಳನ್ನು ಒಂದುಗೂಡಿಸಿ ಕೆಪಿಎಸ್ ಶಾಲೆಗಳನ್ನು ಸ್ಥಾಪಿಸಲು ಚಿಂತನೆ ನಡೆಸಲಾಗಿದೆ. ಕಾಡಾನೆ ಪೀಡಿತ ಬೇಲೂರು ತಾಲ್ಲೂಕಿನ 8 ಶಾಲೆಗಳನ್ನು ಸೇರಿಸಿ ಗೆಡ್ಡೇಹಳ್ಳಿ ಹಾಗು ಬಿಕ್ಕೋಡು ಭಾಗದಲ್ಲಿ 2 ಕೆಪಿಎಸ್ ಶಾಲೆ ತೆರೆಯಲು ಚಿಂತಿಸಲಾಗಿದೆ. ಅದೇ ರೀತಿ ಸಕಲೇಶಪುರ ತಾಲ್ಲೂಕಿನ 15 ಶಾಲೆಗಳನ್ನು ಸೇರಿಸಿ ಬೆಳಗೋಡು, ಮಾರನಹಳ್ಳಿ,ಸುಂಡೇಕೆರೆ, ವನಗೂರು, ಯಸಳೂರು ಭಾಗದಲ್ಲಿ ಒಟ್ಟು 5 ಹಾಗು ಅರಕಲಗೂಡು ತಾಲ್ಲೂಕಿನ 9 ಶಾಲೆಗಳನ್ನು ಒಟ್ಟುಗೂಡಿಸಿ ಮಲ್ಲಿಪಟ್ಟಣದಲ್ಲಿ ಒಂದು ಕೆಪಿಎಸ್ ಶಾಲೆ ತೆರೆಯಲು ಈಗಾಗಲೇ ಶಿಕ್ಷಣ ಇಲಾಖೆ ಅಧಿಕಾರಿಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಈ ಭಾಗದಲ್ಲಿ ತುರ್ತಾಗಿ ಕೆಪಿಎಸ್ ಶಾಲೆಗಳನ್ನು ನಿರ್ಮಿಸಿ, ವಾಹನ ವ್ಯವಸ್ಥೆ ಕಲ್ಪಿಸಿದೆ ನೂರಾರು ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ.

## ಪವರ್ ಲಿಫ್ಟಿಂಗ್ ಸ್ಪರ್ಧೆ: ಸಿಂಚನಾಗೆ ಚಿನ್ನದ ಪದಕ

• ಪ್ರಜೋದಯ ವರದಿ

**ಹಾಸನ:** ನಗರದ ಎಪಿಜೆ ಪಿಯು ಕಾಲೇಜಿನ ದ್ವಿತೀಯ ವರ್ಷದ ವಿಜ್ಞಾನ ವಿದ್ಯಾರ್ಥಿನಿ ಕೆ.ಹೆಚ್.ಸಿಂಚನಾ ಅವರು ರಾಷ್ಟ್ರ ಮಟ್ಟದ ಸಬ್ ಜೂನಿಯರ್ ಹಾಗು ಜೂನಿಯರ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ.




ಆಂಧ್ರ ಪ್ರದೇಶದ ಅಮಲಾಪುರಂನಲ್ಲಿ ಮೇ 15 ರಿಂದ 21ರ ವರೆಗೆ ಪಂದ್ಯಾವಳಿ ನಡೆಯುತ್ತಿದೆ. ಬಾಲ್ಯದಿಂದಲೇ ಕ್ರೀಡೆಯತ್ತ ಆಸಕ್ತಿ ಹೊಂದಿದ್ದ ಸಿಂಚನಾ, ಪವರ್ ಲಿಫ್ಟಿಂಗ್ ಕ್ಷೇತ್ರದಲ್ಲಿ ತಮ್ಮದೇಯಾದ ಛಾಪು ಮೂಡಿಸುತ್ತಿದ್ದಾರೆ. ಕ್ರೀಡಾ ಕುಟುಂಬದ ಹಿನ್ನಲೆ ಹೊಂದಿರುವ ಸಿಂಚನಾ ಅವರ ತಂದೆ ಹನುಮಂತೇಗೌಡ ಕಮ್ಮರಿಗೆ ಕಾಮನ್‌ವೆಲ್ತ್ ಸೇರಿ ಹಲವು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಪದಕ ವಿಜೇತರಾಗಿದ್ದಾರೆ.

ತಾಯಿ ಯಶೋಧ ಸಹ ರಾಷ್ಟ್ರ ಮಟ್ಟದ ವೇಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಕಂಚಿನ ಪದಕ ವಿಜೇತರಾಗಿದ್ದಾರೆ. ಇದೀಗ ಸಿಂಚನಾ ಕೂಡ ಹೆತ್ತವರ ಹಾದಿಯಲ್ಲೇ ಸಾಗುತ್ತಿದ್ದಾಳೆ. 2025ರ ಏಷ್ಯನ್ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಜಯಿಸುವ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಸಿಂಚನಾ ತಮ್ಮ ಸಾಮರ್ಥ್ಯ ಸಾಬೀತುಪಡಿಸಿದ್ದರು.

ಇದೀಗ ರಾಷ್ಟ್ರಮಟ್ಟದ ಚಾಂಪಿಯನ್‌ಶಿಪ್‌ನಲ್ಲಿ ಮತ್ತೊಮ್ಮೆ ಚಿನ್ನದ ಪದಕ ಗೆದ್ದು ಭವಿಷ್ಯದಲ್ಲಿ ಭಾರತ ಪ್ರತಿನಿಧಿಸುವ ಭರವಸೆಯ ಆಶಾ ಕಿರಣವಾಗಿ ಹೊರಹೊಮ್ಮಿದ್ದಾರೆ.

ವಿದ್ಯಾರ್ಥಿನಿ ಸಾಧನೆಗೆ ಕಾಲೇಜಿನ ಸಂಸ್ಥಾಪಕ ಡಿ.ಮುರಳಿ, ಆಡಳಿತ ಮಂಡಳಿ, ಜಿಲ್ಲೆಯ ಕ್ರೀಡಾಭಿಮಾನಿಗಳು, ಪವರ್ ಲಿಫ್ಟಿಂಗ್ ವಲಯ ಹಾಗು ಸಾರ್ವಜನಿಕರಿಂದ ಭಾರೀ ಮೆಚ್ಚುಗೆ ವ್ಯಕ್ತವಾಗಿದೆ.

**ಗಾನಕಲಾಭೂಷಣ ಆರ್.ಕೆ.ಪದ್ಮನಾಭ ಅಭಿಮತ: ರುದ್ರಪಟ್ಟಣ ಸಂಗೀತೋತ್ಸವಕ್ಕೆ ಚಾಲನೆ**

# ಭಕ್ತಿ, ಸಂಗೀತ, ನೃತ್ಯದಿಂದ ಜೀವನದಲ್ಲಿ ಉನ್ನತ ಸಾಧನೆ

• ಪ್ರಜೋದಯ ವರದಿ

**ರಾಮನಾಥಪುರ:** ಭರತನಾಟ್ಯ ಹಾಗು ಸಂಗೀತ ವಿಶ್ವದ ಮೂಲೆ ಮೂಲೆಗೂ ತನ್ನದೆಯಾದ ಖ್ಯಾತಿ ಪಡೆದಿದೆ. ಮಾನವ ಜೀವನದ ಉನ್ನತ ಸಾಧನೆಗೆ ಭಕ್ತಿ, ಸಂಗೀತ ಮತ್ತು ನೃತ್ಯವೇ ನಿಜವಾದ ಮಾರ್ಗ ವಾಗಿದೆ ಎಂದು ಗಾನಕಲಾಭೂಷಣ ವಿದ್ವಾನ್ ಡಾ.ಆರ್.ಕೆ.ಪದ್ಮನಾಭ ಅವರು ಅಭಿಪ್ರಾಯಪಟ್ಟರು.



ರಾಮನಾಥಪುರ ಹೋಬಳಿಯ ಸಂಗೀತ ಗ್ರಾಮವೆಂದೇ ಪ್ರಸಿದ್ಧಿ ಪಡೆದಿರುವ ರುದ್ರಪಟ್ಟಣದ ಶ್ರೀರಾಮ ಮಂದಿರದಲ್ಲಿ ರುದ್ರ ಪಟ್ಟಣ ಸಂಗೀತೋತ್ಸವ ಸಮಿತಿ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿರುವ 23ನೇ ವಾರ್ಷಿಕ ಸಂಗೀತೋತ್ಸ ವದ ಪ್ರಥಮ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶತಮಾನಗಳಿಂದ ಸಂಗೀತ ಮತ್ತು ಭರತನಾಟ್ಯ ಕ್ಷೇತ್ರಕ್ಕೆ ಅನೇಕ ಪ್ರತಿ ಭಾವಂತರನ್ನು ನೀಡಿರುವ ಪವಿತ್ರ ನೆಲ ರುದ್ರಪಟ್ಟಣ. ಇಲ್ಲಿನ ಸಂಗೀತ ಪರಂಪರೆಯನ್ನು ಮುಂದಿನ ಪೀಳಿಗೆಗೆ ಕೊಂಡೊ ಯ್ಯುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಸಂಗೀತದ ಸೌರಭವನ್ನು ಗ್ರಾಮೀಣ ಪ್ರದೇಶಗಳಿಗೂ ಹರಡಿಸುವ ಹಾಗು ಕಲಾವಿದರಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ಐದು ದಿನಗಳ ಸಂಗೀತೋತ್ಸವವನ್ನು ಆಯೋಜಿಸಲಾಗಿದೆ. ಸುತ್ತಮುತ್ತಲಿನ ಭಾಗಗಳ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ರುದ್ರಪಟ್ಟಣ ಕರ್ನಾಟಕ ಬ್ಯಾಂಕ್ ವ್ಯವಸ್ಥಾಪಕ ಆರ್.ಷಣ್ಮುಖ ಅವರು, ಸನಾತನ ಧರ್ಮದ ಸಂಗೀತ, ಸಾಹಿತ್ಯ ಮತ್ತು ಸಂಸ್ಕೃತಿ ಯನ್ನು ಹಿರಿಯರು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಅವರ ಪರಂಪರೆಯನ್ನು ಮುಂದು ವರಿಸುವ ಮೂಲಕವೇ ನಾವು ಹಿರಿಯರಿಗೆ ನಿಜವಾದ ಗೌರವ ಸಲ್ಲಿಸಿ ದಂತಾಗುತ್ತದೆಂದು ಹೇಳಿದರು.

ಸಂಗೀತೋತ್ಸವದ ಮೊದಲ ದಿನ ರಶ್ಮಿ ಹರಿಪ್ರಸಾದ್ ಅವರಿಂದ ಭರತ ನಾಟ್ಯ ಪ್ರದರ್ಶನ ನಡೆಯಿತು. ಬಳಿಕ ವಿ.ಧನ್ಯತಾ ಹಾಗು ವಿ.ಸೂರ್ತೂರ್ ಅವರಿಂದ ಗಾಯನ ಕಾರ್ಯಕ್ರಮ ಜರುಗಿತು. ನಂತರ ಮಾ.ಅರ್ಣವ್ ಹಾಗು ಹರೀಶ್ ಕೌಶಿಕ್ ಅವರಿಂದ ಸಂಗೀತ ಕಾರ್ಯ ಕ್ರಮ ಮನಸೆಳೆಯಿತು. ವಿದ್ವಾನ್ ಭಾಕ್ಷರ್ ಅವದಾನಿ, ಆರ್.ಎಸ್.ಮಾರ್ಕಂಡೇಯ, ವಿ.ರಮಾ ಸೇರಿ ಅನೇಕ ಗಣ್ಯರು ಹಾಗು ಸಂಗೀತಾಸಕ್ತರು ಉಪಸ್ಥಿತರಿದ್ದರು.

## ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರೀಯವಾದಿ ಸರ್ಕಾರ: ಸುವೇಂದು ಅಧಿಕಾರಿ

• ಪ್ರಜೋದಯ ವರದಿ



**ಸಿಲಿಗುರಿ:** ಪಶ್ಚಿಮ ಬಂಗಾಳದಲ್ಲಿ ರಚನೆಯಾಗಿರುವ ಬಿಜೆಪಿ ಸರ್ಕಾರ ರಾಷ್ಟ್ರೀಯವಾದಿಗಳಾದ್ದಾಗಿರಲಿದೆ ಎಂದು ಮುಖ್ಯ ಮಂತ್ರಿ ಸುವೇಂದು ಅಧಿಕಾರಿ ಅವರು ತಿಳಿಸಿದ್ದಾರೆ.

ಉತ್ತರ ಬಂಗಾಳ ಪ್ರವಾಸದಲ್ಲಿರುವ ಅವರು ಬುಧವಾರ ಇಲ್ಲಿನ ಬಿಜೆಪಿ ಕಚೇರಿಗೆ ಭೇಟಿ ನೀಡಿ ಮಾತನಾಡಿ, ನಮ್ಮದು ರಾಷ್ಟ್ರೀಯವಾದಿಗಳ ಸರ್ಕಾರವಾಗಿದ್ದು ದೇಶದ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಎತ್ತಿ ಹಿಡಿಯಲಿದೆ ಎಂದು ಹೇಳಿದರು.

ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳನ್ನು ನಿಗದಿತ ಅವಧಿಯೊಳಗೆ ಈಡೇರಿಸಲು ಸರ್ಕಾರ ಬದ್ಧವಾಗಿದೆ. ಸಂಕಲ್ಪ ಪತ್ರದಲ್ಲಿ ಘೋಷಿಸಿದ ಹಲವು ಯೋಜನೆಗಳ ಲಾಭಗಳನ್ನು ಜನರು ಈಗಾಗಲೇ ಪಡೆದುಕೊಳ್ಳುತ್ತಿದ್ದಾರೆ. ಜನರ ಇಚ್ಚೆಗೆ ತಕ್ಕಂತೆ ಕೆಲಸ ಮಾಡಲು ಬದ್ಧವಾಗಿದೆ ಎಂದು ಹೇಳಿದ್ದಾರೆ.

ಬಿಜೆಪಿ ಸರ್ಕಾರ ಈಗಾಗಲೇ ಅನ್ನಪೂರ್ಣ ಯೋಜನೆ, ಮಹಿಳೆಯರಿಗೆ ಮಾಸಿಕ 3 ಸಾವಿರ ನೆರವು, ಮಹಿಳೆಯರಿಗೆ ಉಚಿತ ಬಸ್ ಸೇವೆ, ಆಯುಷ್ಮಾನ್ ಭಾರತ್ ಯೋಜನೆಯನ್ನು ಈಗಾಗಲೇ ಜಾರಿಗೊಳಿಸಿದೆ ಎಂದು ಪುನರುಚ್ಛರಿಸಿದ್ದಾರೆ.

ರಾಜ್ಯದ ಬದಲಾದ ಪರಿಸ್ಥಿತಿಯಲ್ಲಿ ಮಾಫಿಯಾ ಆಡಳಿತ ಅಂತ್ಯಕಂಡಿದ್ದು, ದೇಶ ವಿರೋಧಿ ಚಟುವಟಿಕೆಗಳಿಗೆ ರಾಜ್ಯದಲ್ಲಿ ಅವಕಾಶ ನೀಡುವುದಿಲ್ಲ ಎಂದು ಹೇಳಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK